

# ಬಸವರಾಜ ಹಳಿಜೋಳ

# Basavaraja Halijol




**ಕರ್ನಾಟಕ ಲಲಿತಕಲಾ ಅಕಾಡೆಮಿ**
ಎರಡನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು - ೫೬೦ ೦೦೨

**Karnataka Lalithakala Academy**
2nd Floor, Kannada Bhavana, J.C. Road,
Bangalore - 560 002



## ಆರ್.ಜಿ. ರಾಯಕರ

ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ೧೯೩೪ರಲ್ಲಿ ಜನಿಸಿದ ಶ್ರೀ ಆರ್.ಜಿ. ರಾಯಕರರರು, ಮುಂಬಯಿಯ ಸರ್.ಜೆ.ಜೆ. ಕಲಾಶಾಲೆಯ ಪದವೀಧರರು. ಶ್ರೀಯುತರು ೩೫ ವರ್ಷ ಸಮರ್ಥ ಕಲಾ ಅಧ್ಯಾಪಕರಾಗಿ ದುಡಿದು ನಿವೃತ್ತರಾಗಿರುವರು. ರಾಜ್ಯ ಕಲಾಶಿಕ್ಷಣ, ಕಲಾರಂಗಕ್ಕೆ ಚಿರಪರಿಚಿತರು. ಅವರು ನುರಿತ ಲೇಖಕರಾಗಿ, ೯ ಕೃತಿಗಳು ಪ್ರಕಟಗೊಂಡಿವೆ. ಆಧ್ಯಾತ್ಮಿಕ, ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿದ್ದಾರೆ. ಆಕಾಶವಾಣಿಯಿಂದ ಭಾಷಣಗಳು ಬಿತ್ತರಿಸಲ್ಪಟ್ಟಿವೆ. ರಾಜ್ಯದ ಪ್ರಮುಖ ಸಂಗ್ರಹಗಾರರು ಹಾಗೂ ಕಲಾವಿದರ ಬಳಗದಲ್ಲಿ ಚಿರಪರಿಚಿತರು.

೧೯೮೯ರಲ್ಲಿ ರಾಜ್ಯೋತ್ಸವ ಹಾಗೂ ೧೯೮೧ರಲ್ಲಿ ಲಲಿತಕಲಾ ಅಕಾಡೆಮಿಯ ''ಪ್ರಶಸ್ತಿ''ಗಳನ್ನು ನೀಡಿ ಸರಕಾರ ಅವರನ್ನು ಗೌರವಿಸಿದೆ. ಇವರು ಶ್ರೀ ಬಸವರಾಜ ಹಳಿಜೋಳ ಅವರ ಶಿಷ್ಯರಾಗಿದ್ದು, ಅವರನ್ನು ಸಮೀಪದಿಂದ ಬಲ್ಲವರು.

# ಬಸವರಾಜ ಹಳಿಜೋಳ
# Basavaraja Halijol

ಆರ್.ಜಿ. ರಾಯಕರ
**R.G. Rayakar**

**ಕರ್ನಾಟಕ ಲಲಿತಕಲಾ ಅಕಾಡೆಮಿ**
ಎರಡನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು - ೫೬೦ ೦೦೨

**Karnataka Lalithakala Academy**
2nd Floor, Kannada Bhavana, J.C. Road,
Bangalore - 560 002

**Basavaraja Halijol**
Monograph by **Sri R.G. Rayakar**
Published by **H. Shankarappa,** Registrar,
Karnataka Lalithakala Academy,
IInd Floor,Kannada Bhavana, J.C. Road, Bangalore - 2

First Impression : 2000
Copies : 1000

Price : Rs. 25/-

*ಪ್ರಧಾನ ಸಂಪಾದಕರು :*
**ಪ್ರೊ. ಅಂದಾನಿ ಎ.ಜಿ.**

*ಪ್ರಕಟಣಾ ಸಮಿತಿ :*
**ಶ್ರೀ ಚಿ.ಸು. ಕೃಷ್ಣಸೆಟ್ಟಿ**
**ಶ್ರೀ ಆರ್.ಜಿ. ರಾಯಕರ**
**ಶ್ರೀ ರಾಜೇಂದ್ರ ಅಷ್ಟಗಿ**
**ಶ್ರೀ ಅಶೋಕ್ ಟಿ. ಅಕ್ಕಿ**
**ಶ್ರೀಮತಿ ಬಾನು ಮುನಾಫ್**

*Translated by :*
**G.S. Siddalingaiah**

*ಪ್ರಕಾಶಕರು :*
**ಎಚ್. ಶಂಕರಪ್ಪ**
ರಿಜಿಸ್ಟ್ರಾರ್

*Printed By :*
**Sindhu Graphics**
Wilson Garden, Bangalore - 27
Ph : 2230872

# ಅಧ್ಯಕ್ಷರ ಮಾತು

ಈ ಶತಮಾನದ ರಾಜ್ಯದ ಚಿತ್ರಕಲಾ ಶಿಕ್ಷಣದ ಪರಂಪರೆಯಲ್ಲಿ 'ಭಾವಚಿತ್ರಗಳಿಗಾಗಿ' ತನ್ನನ್ನು ಗುರುತಿಸಿಕೊಂಡ ಶ್ರೀ ಹಳಿಜೋಳ ಅವರ ಬದುಕು ವಿಶೇಷವಾಗಿದ್ದು, ಬದುಕಿನ ಉದ್ದಕ್ಕೂ ಹೋರಾಟದ ಸ್ವಾಭಿಮಾನಿ ಕಲಾವಿದರಾಗಿದ್ದರು. ಮುಂಬೈ-ಕರ್ನಾಟಕದ ಪ್ರಮುಖ ನಗರ ಹುಬ್ಬಳ್ಳಿ ಕಲಾಶಾಲೆಯಲ್ಲಿ ಉಪನ್ಯಾಸಕರಾಗಿ ತಮ್ಮ ಫೋಟೋ ಸ್ಟುಡಿಯೋ ಮೂಲಕ ಯುವ ಕಲಾವಿದರ ಹೃದಯದಲ್ಲಿ ಅತ್ಯಂತ ಆದರಣೀಯ ವ್ಯಕ್ತಿಯಾಗಿ ಗುರುತಿಸಿಕೊಂಡಿದ್ದರು. ಹುಬ್ಬಳ್ಳಿ-ಧಾರವಾಡದ ಮನೆಮನೆಗಳಲ್ಲಿ ಅವರು ರಚಿಸಿದ ಭಾವಚಿತ್ರಗಳ ಮೂಲಕ ಜನರ ಭಾವನೆಗಳಿಗೆ ಸ್ಪಂದಿಸಿದ್ದರು. ಅಸಾಧಾರಣ ವ್ಯಕ್ತಿತ್ವ ಹೊಂದಿದ್ದ ಇಂತಹ ಹಿರಿಯ ಕಲಾವಿದರ ಜೀವನ ಕುರಿತು ಪರಿಚಯಿಸುವ ಕೆಲಸ ಅಕಾಡೆಮಿ ಪುಸ್ತಕ ರೂಪದಲ್ಲಿ ಪ್ರಕಟಿಸುವುದಕ್ಕೆ ಸಂತೋಷವೆನಿಸುತ್ತದೆ.

ಕಲಾವಿದರ ಪರಿಚಯವನ್ನು ಶ್ರಮವಹಿಸಿ ಅನೇಕ ವಿಚಾರಗಳ ದಾಖಲೆ ಮಾಡಿದ ಹಿರಿಯರಾದ ಶ್ರೀ ಆರ್.ಜಿ. ರಾಯ್ಕರ್ ಅವರಿಗೆ ಧನ್ಯವಾದಗಳು ಮತ್ತು ಪುಸ್ತಕಕ್ಕೆ ಬೇಕಾದ ಅನೇಕ ಮಾಹಿತಿಗಳನ್ನು ಒದಗಿಸಿಕೊಟ್ಟ ಶ್ರೀಮತಿ ಹಳಿಜೋಳ ಅವರಿಗೂ ಹಾಗೂ ಅವರ ಹಿರಿಯ ಪುತ್ರ ಶ್ರೀ ಮೋಹನ ಹಳಿಜೋಳ ಅವರಿಗೂ ಧನ್ಯವಾದಗಳು.

ವಿದ್ವಾಂಸರಿಗೂ, ಕಲಾವಿದ್ಯಾರ್ಥಿಗಳಿಗೂ, ಕಲಾ ಆಸಕ್ತರಿಗೂ, ದೃಶ್ಯ ಸಂಸ್ಕೃತಿಗೂ ಈ ಪುಸ್ತಕ ಉಪಯುಕ್ತವಾಗುತ್ತದೆ ಎಂಬ ನಂಬಿಕೆ ನನಗಿದೆ. ಕಲಾಭಿಮಾನಿಗಳು ಇದನ್ನು ಸ್ವಾಗತಿಸುತ್ತಾರೆಂದು ಬಯಸುತ್ತೇನೆ.

**ಪ್ರೊ॥ ಅಂದಾನಿ ಎ.ಜಿ.**
ಅಧ್ಯಕ್ಷರು



ಹಳಿಜೋಳ ಬಿ. ಎಂ.

Halijola B.M.

# ಕಲಾಚಾರ್ಯ ಬಸವರಾಜ ಹಳಿಜೋಳ

## ಕಲೆಯ ಕನ್ನಡಿ

ಕನ್ನಡಿಗರು ಕಲೆಗೆ ಕನ್ನಡಿ, ''ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್'' ಎಂದಿದ್ದಾನೆ, ಕವಿ ನೃಪತುಂಗ. ಚಿತ್ರಕಲೆಗೆ ಸಂಬಂಧಿಸಿದ ಹಾಗೆ ಮಹಾಭಾರತದಲ್ಲಿ ಬರುವ ಒಂದು ಕತೆಯಂತೆ ದೇವಲೋಕದ ಅಪ್ಸರೆ ಚಿತ್ರಲೇಖಾ ಎಂಬವಳು ಅಸುರರಾಜ ಬಾಣಾಸುರನ ಮಗಳು ಉಷೆಯ ಸಖಿಯಾಗಿ ಅವಳಿಗೆ ಬೇರೆ ಬೇರೆ ರಾಜ್ಯಗಳ ರಾಜಕುಮಾರರ ಚಿತ್ರಗಳ ಸ್ಮೃತಿ ಚಿತ್ರ (Memory Drawing)ನ್ನು ಬಿಡಿಸಿ ತೋರಿಸಿ ನೀನು ಮೆಚ್ಚಿದ ರಾಜಕುಮಾರನಾರು ಎಂದು ಕೇಳುತ್ತಿದ್ದಳಂತೆ. ಪ್ರತಿಯೊಂದು ರಾಜಧಾನಿಯ ಹೊರಗಡೆಯಲ್ಲಿ 'ಪ್ರತಿಮಾಗೃಹ'ವನ್ನು ನಿರ್ಮಿಸಿ ಅದರಲ್ಲಿ ಗತಿಸಿದ ರಾಜರ ಮೂರ್ತಿಗಳನ್ನಿಡಲಾಗುತ್ತಿತ್ತು. ಸಂಸ್ಕೃತ ನಾಟಕಕಾರ ಭಾಸನ ಪ್ರಸಿದ್ಧ ನಾಟಕ ''ಪ್ರತಿಮಾ''ದಲ್ಲಿ ರಾಮನು ವನವಾಸಕ್ಕೆ ಹೋದದ್ದು, ತಂದೆ ದಶರಥನ ಅಂತ್ಯವಾದದ್ದು ಈ ವಿವರಗಳನ್ನು ಭರತನು ಪ್ರತಿಮಾಗೃಹ ಪ್ರವೇಶಿಸಿದಾಗಲೇ

ತಿಳಿಯುತ್ತದೆ. ಇಂದು ಕಲಾಚಾರ್ಯ ಬಸವರಾಜ ಮಡಿವಾಳಪ್ಪಾ ಹಳಿಜೋಳ ಇಂತಹ ಪ್ರತಿಮಾ ಗೃಹವನ್ನು ಸೇರಿದ್ದಾರೆ. ಅವರ ಬದುಕಿನ ಒಂದೊಂದೇ ಚಿತ್ರವನ್ನು ನೋಡೋಣ.

ಜೀವನವನ್ನು ನಿಕೃಷ್ಟ ರೀತಿಯಿಂದ ಆರಂಭ ಮಾಡಿದ ಅವರು ಉತ್ಕೃಷ್ಟ ಕಲಾಸಿದ್ಧಿಯ ಉತ್ತುಂಗ ಶಿಖರ ಏರಿ ನಿಂತಿದ್ದಾರೆ. ಅವರ ಬದುಕಿನಲ್ಲಿ ಬೆಲ್ಲದ ಭಾಗಕ್ಕಿಂತ ಬೇವಿನ ಭಾಗವೇ ಹೆಚ್ಚಿನದು. ಆದರೆ ಅವರು ಮಾತ್ರ ಎಲ್ಲರಿಗೂ ಬೆಲ್ಲವಾಗಿಯೇ ಇದ್ದರು. ಅವರಿಂದ ಸ್ಫೂರ್ತಿ ಪಡೆದ ಅಪಾರ ಶಿಷ್ಯವರ್ಗ ತಮ್ಮ ಅಸಾಮಾನ್ಯವಾದ ಕಲಾ ವ್ಯಕ್ತಿತ್ವದ ಮೂಲಕ ಬಸವರಾಜ ಹಳಿಜೋಳ ಅವರು ಎಷ್ಟು ಪ್ರಭಾವಿ ಹಾಗೂ ಮಹತ್ವದ ಕಲಾಗುರುಗಳಾಗಿದ್ದರೆಂಬುದನ್ನು ಗುರುತಿಸುವಂತೆ ಮಾಡಿದ್ದಾರೆ.

## ಅರಳುವ ಪ್ರತಿಭೆ

ಅರಳುವ ಮಲ್ಲಿಗೆ ಮೊಗ್ಗಿನಲ್ಲೆ ಕಂಪು ಸೂಸಲು ಪ್ರಾರಂಭ. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ದೇಶನೂರ ಗ್ರಾಮದಲ್ಲಿ ದಿನಾಂಕ ೧೩-೧೨-೧೯೩೪ರಂದು ಜನನ. ಬಸವರಾಜರ ತಂದೆ ಮಡಿವಾಳಪ್ಪ, ತಾಯಿ ಭಾಗೀರಥಿ, ವೃತ್ತಿ ನೇಕಾರರದು. ಅನೇಕ ಬಣ್ಣದ ನೂಲು ಸೇರಿ ಒಂದು ಸುಂದರ ಬಟ್ಟೆ ಸಿದ್ಧವಾಗುವಂತೆ ಬಸವರಾಜರ ಪ್ರಾಥಮಿಕ ಶಿಕ್ಷಣದ ಒಂದೊಂದು ತರಗತಿ ದೇಸನೂರು, ಹೊಸರು, ವಡಗಾಂವ ಹೀಗೆ ಮೂರು ಬೇರೆ ಬೇರೆ ಊರಿನಲ್ಲಿ ನಡೆದು ಮೂರನೇ ತರಗತಿಗೇ ಅವರ ಶಿಕ್ಷಣ ಮುಕ್ತಾಯ. ಮುಂದೆ ಬಸವರಾಜರಿಗೆ ಅವರ ಅರಿವೇ ಅವರ ಗುರು. ಏಕಲವ್ಯನು ಗುರುವಿಲ್ಲದೇ ತಾನೇ ಗುರುವಿನ ನಿರ್ಮಾಣ ಮಾಡಿಕೊಂಡಿದ್ದ. ಚಿಕ್ಕ ಬಾಲಕ ಬಸವರಾಜನಿಗೆ ನಿಸರ್ಗವೇ ಗುರುವಾಯಿತು. ಶಾಲೆ, ಕಾಲೇಜುಗಳ ಪದವಿಗಳಷ್ಟೆ ನಮ್ಮನ್ನು ವಿದ್ಯಾವಂತರನ್ನಾಗಿ ಮಾಡುವುದಿಲ್ಲ ವೆಂಬುದಕ್ಕೆ ಇವರ ಜೀವನವೇ ಒಂದು ಉದಾಹರಣೆ. ಶಾಲೆಯಲ್ಲಿ ವಿದ್ಯಾರ್ಥಿಗಳ ನೋಟು ಬುಕ್ಕಿನ ಮೇಲೆಲ್ಲ ಪ್ರಾಣಿ, ಪಕ್ಷಿ, ನಿಸರ್ಗ ದೃಶ್ಯಗಳನ್ನು

ಬಿಡಿಸುತ್ತಿದ್ದ ಬಾಲಕ ಬಸವರಾಜ ಶಿಕ್ಷಕರ ಹಾಗೂ ಗೆಳೆಯರ ಗುಂಪಿನ ಆಕರ್ಷಣೆಯಾಗಿದ್ದರು. ಅವನ ಪರಿಣತಿಯನ್ನು ಕಂಡು, ''ರಾಜೂ'' ಇನ್ನು ಮೇಲೆ ನಿನ್ನ ಕ್ಷೇತ್ರ ಚಿತ್ರಕಲೆ ಎಂದು ಎಲ್ಲರೂ ಹೇಳುವವರೇ. ಮುಂದೆ ಮರವಾಗಲಿರುವದು ಚಿಕ್ಕ ಮೊಳಕೆಯಲ್ಲಿಯೇ ಎಲ್ಲರ ಗಮನ ಸೆಳೆದಿತ್ತು.

## ಬದುಕಿನ ಪರೀಕ್ಷೆ

ಬೆಳೆಯುತ್ತಿರುವ ಕಲಾವಿದನಿಗೆ ಅನ್ನದ ಸಮಸ್ಯೆ ಕಾಡಿತ್ತು. ಊರಲ್ಲಿ ಊಟಕ್ಕೆ ತೊಂದರೆ ಎಂದು ಹೊಸೂರಿಗೆ ಸೋದರ ಮಾವನ ಮನೆಗೆ ಹೋದರೆ ಮಾವ ''ಕಲಿತು ಏನು ಮಾಡತಿ'' ಎಂದು ಆಡುಗಳನ್ನು ಕಾಯಲು ಕಳಿಸಿದ. ಒಂದು ಆಡು ತಪ್ಪಿಸಿಕೊಂಡು ಕೈಗೆ ಸಿಗದೆ ಮುರಗೋಡಿಗೆ ಓಡಿ ಹೋಯಿತು. ಬಾಲಕ ಬಸವರಾಜ ಚನ್ನಾಗಿ ಪೆಟ್ಟು ತಿನ್ನಬೇಕಾಯಿತು. ಮುಂದೆ ಅಣ್ಣನೊಡನೆ ವಡಗಾಂವಿಗೆ ಹೋದರೂ ಅದೇ ಗತಿ. ಶಹಾಪುರದಲ್ಲಿ ಹಮಾಲಿಯಾಗಿ ದುಡಿದರು. ಮನೆಯಲ್ಲಿ ತಂದೆ, ತಾಯಿ, ಮೂವರು ಗಂಡು ಮಕ್ಕಳು ಇಬ್ಬರು ಹೆಣ್ಣುಮಕ್ಕಳು ಈ ಏಳು ಜನ, ಒಬ್ಬನ ಕೂಲಿಯ ಮೇಲೆ ಬದುಕಬೇಕು. ಇದು ಕಲಾವಿದನಿಗೆ ಸರಸ್ವತಿಯು ಮಾಡಿದ ಸತ್ವಪರೀಕ್ಷೆ. ಈ ಸಮಯದಲ್ಲಿ ಬಸವರಾಜರ ಅಣ್ಣ ವೀರಪ್ಪನು ಎರಡು ವರ್ಷ ಹಿರಿಯ, ಹುಬ್ಬಳ್ಳಿಯಲ್ಲಿ ಎಚ್.ಎಸ್. ಆದ್ವಾನಿ, ನ್ಯಾಶನಲ್ ಸ್ಟುಡಿಯೋ ಮಾಲಿಕರಿಗೆ ಸಿಕ್ಕು ಕೆಲಸಕ್ಕೆ ಸೇರಿದ. ತಮ್ಮ ಬಸವರಾಜನೂ ಕಲಾವಿದನೆಂದು ಪರಿಚಯಿಸಿ ಅಲ್ಲಿಯೇ ಕೆಲಸಕ್ಕೆ ಸೇರಿಸಿದ. ಆಗ ಬಸವರಾಜರಿಗೆ ೧೩ ವರ್ಷ, ಇದು ನಡೆದದ್ದು ೧೯೩೮ರಲ್ಲಿ.

## ಸಾಹಸದ ಕ್ಷಣಗಳು

ಪ್ರಾಣಿ ಜೀವನದಿಂದ ಮನುಷ್ಯ ಜೀವನದ ತನಕ ಸಾಹಸವೇ ಬದುಕಿನ ಹಂತವನ್ನು ನಿರ್ಧರಿಸುತ್ತದೆ. ಯೌವನಕ್ಕೆ ಪ್ರವೇಶಿಸುತ್ತಿದ್ದ ಬಸವರಾಜರಿಗೆ ಬಡತನವು ಸಾಹಸಕ್ಕೆ ಪ್ರೇರೇಪಿಸಿದ್ದರಲ್ಲಿ ಏನು ವಿಶೇಷವಿಲ್ಲ. ಹುಬ್ಬಳ್ಳಿಯ ಸ್ಟುಡಿಯೋ ಕೆಲಸವು ಅವರ ಕಲಾಪ್ರತಿಭೆಯನ್ನು ಪ್ರಕಟಿಸಲು

ಅವಕಾಶ ಕಲ್ಪಿಸಿತು. ಸ್ಟುಡಿಯೋದಲ್ಲಿ ನಡೆಯುವ ಚಿತ್ರ ಸಂಸ್ಕರಣ, ಸೆಟ್ಟಿಂಗ, ಪ್ರಿಂಟಿಂಗ, ರೀ-ಟಚಿಂಗ, ಪೇಯಿಂಟಿಂಗ, ಎನ್‌ಲಾರ್ಜ್‌ಮೆಂಟ್, ಅಭಿವ್ಯಕ್ತಿ ಚಿತ್ರಗಳ ಮಾಧ್ಯಮಗಳ ಬಳಕೆ ಅವರ ಮನದಾಳದಲ್ಲಿ ಬಿಂದುವಾಗಿ ಮೂಡಿ ಅದನ್ನು ಸಾಧಿಸುವ ಹುಮ್ಮಸ್ಸು ಉಂಟಾಯಿತು, ಅದಕ್ಕೆ ಸಮಯ ಕಾಯುತ್ತಿತ್ತು. ಒಮ್ಮೆ ನ್ಯಾಶನಲ್ ಸ್ಟುಡಿಯೋದ ಮಾಲಿಕರೊಡನೆ ಒಂದು ಚಿಕ್ಕ ಮನಸ್ತಾಪವಾದ ನೆಪಕ್ಕೆ ಅವರು ಮನೆಯಲ್ಲಿ ಯಾರಿಗೂ ಹೇಳದೆ, ಟಿಕೆಟ್ ಇಲ್ಲದೇ ಮುಂಬೈಗೆ ಹೋದರು. ಅಲ್ಲಿ ಕೆಲಸದ ಸಲುವಾಗಿ ಅಲೆಯುತ್ತಿದ್ದಾಗ ದಿ.ನರಸವಾಣಿಜಿಯವರಲ್ಲಿ ದಿನಕ್ಕೆ ಒಂದು ರೂಪಾಯಿ ವೇತನ ಪಡೆದು ಕಲೆಯ ಕೆಲಸಕ್ಕೆ ಸೇರಿದರು. ಆದರೆ ತಲೆ ಇನ್ನೇನೋ ಯೋಚಿಸುತ್ತಿತ್ತು, ಹುಬ್ಬಳ್ಳಿಗೆ ಬಂದರು. ವಾಪಸ್ ಮುಂಬಯಿಗೇ ಹೋದರು. ಹುಬ್ಬಳ್ಳಿಯವರೇ ಆಗಿದ್ದ ನಿರ್ದೇಶಕ ವ್ಹಿ. ಶಾಂತರಾಮರು ಡಾ॥ ಕೊಟ್ನಿಸಕಿ ಅಮರ ಕಹಾನಿ ಚಿತ್ರ ತಯಾರಿಸುತ್ತಿದ್ದರು. ಅಲ್ಲಿ ಅವರು ಬಸವರಾಜರ ಪ್ರತಿಭೆ ಗುರುತಿಸಿ ಪ್ರೋತ್ಸಾಹ ನೀಡಿದರು. ಕುಂಚ ಸರಾಗವಾಗಿ ಚಲಿಸಿತು. ಬಸವರಾಜರ ದೈವ ಏರುಮುಖವಾಗಿತ್ತು. ದೊಡ್ಡ ದೊಡ್ಡ ಪೋಸ್ಟರ್, ರಾಜವಾಡೆ ದೃಶ್ಯ, ಹೂವಿನ ತೋಟ, ತಡಸಲ ದೃಶ್ಯ ಮುಂತಾದ ಪ್ರತಿಸೃಷ್ಟಿ ಮಾಡುವ ಸೆಟಿಂಗ್‌ಗಳಿಗೆ ಜೀವ ತುಂಬಿದರು. ಬಸವರಾಜರ ಬದುಕಿನ ಈ ಘಟ್ಟ ಹೊಸ ತಿರುವು ಪಡೆದು ಹೊಸ ಜಗತ್ತನ್ನು ಪ್ರವೇಶಿಸಿದಂತಾಯಿತು.

ಮುಂಬಯಿಯ ಕಾಲಬಾದೇವಿ ರೋಡಿನಲ್ಲಿ ಕೇಶವರಾವ್ ಮಾನೆ ಎಂಬ ಒಬ್ಬ ಪೋಲಿಸ್ ಅಧಿಕಾರಿ ತನ್ನ ಹೆಂಡತಿಯ ವರ್ಣಚಿತ್ರ ಬರೆಯಿಸಿದ. ಆ ಚಿತ್ರ ಅವರ ಬದುಕಿನ ಯಥಾರ್ಥ ಚಿತ್ರವಾಗಿ ಮೂಡಿಬಂತು. ಈ ಭಾವ ಚಿತ್ರದಲ್ಲಿ ತಮ್ಮದೇ ಶೈಲಿಯಲ್ಲಿ ಬಣ್ಣಗಳನ್ನು ಬಹು ಅಚ್ಚುಕಟ್ಟುತನದಿಂದ ಬಳಸಿ ಆಕೆಯ ಭಾವನೆ, ವಿಚಾರಗಳಿಗೆ ಪ್ರೌಢಿಮೆಯ ಮೆರಗು ನೀಡಿದರು. ಅದನ್ನು ಕಂಡು ಆ ಪೋಲೀಸ್ ಅಧಿಕಾರಿ ಅತ್ತುಬಿಟ್ಟ. ಅಪ್ಪಿ ಮುದ್ದಾಡಿದ. ಬಸವರಾಜರನ್ನು ಬಲವಂತದಿಂದ ತನ್ನ ಮನೆಗೆ ಕರೆದುಕೊಂಡು ಹೋಗಿ ತನ್ನ ಮನೆಯಲ್ಲಿಯೇ ಇರುವಂತೆ ಆಗ್ರಹಪಡಿಸಿದ. ಅನಾಥನಾಗಿ ಮುಂಬಯಿ ಸೇರಿದ ಬಸವರಾಜನಿಗೊಂದು ನೆಲೆಸಿಕ್ಕಂತಾಯಿತು. ಅದೇ ವೇಳೆಗೆ ವಿಷಮ ಶೀತ ಜ್ವರದಿಂದ ಬಳಲುತ್ತಿದ್ದ ಇವರಿಗೆ ಶ್ರೀಮಾನೆಯವರು

ಆತ್ಮೀಯತೆಯಿಂದ ಶುಶ್ರೂಷೆ ಮಾಡಿ ಉಪಚರಿಸಿದರು. ಬಸವರಾಜರು ಚೇತರಿಸಿಕೊಂಡ ಮೇಲೆ ಮಾನೆಯವರು ಅವರ ಮಗಳನ್ನೇ ಲಗ್ನವಾಗುವಂತೆ ಬಸವರಾಜರ ಮೇಲೆ ಒತ್ತಾಯ ತಂದರು. ಅವರ ಮಾತನ್ನು ನಿರಾಕರಿಸಲೂ ಆಗದೆ, ಕಲ್ಪನಾತೀತ ಪಾವಿತ್ರತೆ ಹೊಂದಿದ್ದ ತಮ್ಮ ಬಾಂಧವ್ಯಕ್ಕೆ ಬೇರೆ ಅರ್ಥ ಕೊಡಲೂ ಇಚ್ಛಿಸದೆ, ತಾನು ಊರಿಗೆ ಹೋಗಿ ಬರುತ್ತೇನೆಂದು ಹೇಳಿ ಹುಬ್ಬಳಿಗೆ ಬಂದವರು ಮುಂಬಯಿಗೆ ಹೋಗಲೇ ಇಲ್ಲ.

## ಬಸವರಾಜ ಸ್ಟುಡಿಯೋ

ಹುಬ್ಬಳ್ಳಿಯಲ್ಲಿ ಒಬ್ಬರು ಸ್ಟುಡಿಯೋ ಪ್ರಾರಂಭಿಸಲು ಮೂರು ಸಾವಿರ ರೂಪಾಯಿ ಕೊಟ್ಟರು. ಉತ್ಪನ್ನದಲ್ಲಿ ಕೆಲಭಾಗ ಅವರಿಗೆ ಕೊಡಬೇಕೆಂದು ಮಾತು ಆಗಿತ್ತು. ಆದರೆ ಸ್ಟುಡಿಯೋ ಸಾಕಷ್ಟು ಪ್ರಗತಿ ಸಾಧಿಸದ ಕಾರಣ ಹಣ ಹಿಂದಿರುಗಿಸಲಾಗಲಿಲ್ಲ. ಆಗ ಆ ಹಣಕೊಟ್ಟವರು ಸ್ಟುಡಿಯೋ ಮೇಲೆ ಒಬ್ಬ ಮೆನೇಜರನನ್ನು ನೇಮಿಸಬೇಕೆಂದು ಹೇಳಿ ಒತ್ತಾಯಿಸಿ ಸ್ಟುಡಿಯೋಕ್ಕೆ ಬೀಗ ಹಾಕಿದರು, ಆ ದಿನ ಮಹಾನವಮಿ.

ಆದರೆ ಮಹಾಮಾತೆಯ ಆಶೀರ್ವಾದ ಸದಾ ಅವರ ಮೇಲಿತ್ತು. ಅವಳ ಅನುಗ್ರಹವೆಂಬಂತೆ, ದುರ್ಗಾ ಹೋಟೆಲ್‌ನಲ್ಲಿ ಚಹಾಪಾನ ಮಾಡುತ್ತ ಕುಳಿತಾಗ ಹೋಟೆಲ್ ಮಾಲೀಕರಾದ ಆಲೆವೂರ ಅನಂತರಾಯ ಭಟ್ಟರು, ಇವರ ವಿಷಯವನ್ನು ತಿಳಿದು ಹೆದರಬೇಡ ಎಂದು ಎರಡು ಸಾವಿರ ರೂಪಾಯಿ ಕೊಟ್ಟು ನಿನಗೆ ಸಾಧ್ಯವಾದಾಗ ತಿರುಗಿಕೊಡು ಎಂದು ಹೇಳಿದರು. ಮುಂದೆ ಕೆಲವೇ ದಿನದಲ್ಲಿ ಬೆಳಗಾವಿ ಗಲ್ಲಿಯಲ್ಲಿ ''ಬಸವರಾಜ ಸ್ಟುಡಿಯೋ'' ಆರಂಭವಾಗಿ ಪ್ರಗತಿಯಿಂದ ನಡೆಯ ತೊಡಗಿತು.

## ಗುರುವಿನ ಹಂಬಲ

ಬಸವರಾಜರಿಗೆ, ತಾನು ಗುರುಮುಖದಿಂದ ಚಿತ್ರಕಲೆಯ ಅಭ್ಯಾಸ

ಮಾಡಬೇಕೆಂಬ ಒಂದೇ ಜಿಜ್ಞಾಸೆ ಕಾಡುತ್ತಿತ್ತು. ಚಿತ್ರಕಲೆಯ ಬಗೆಗಿನ ತೀವ್ರವಾದ ಆಸಕ್ತಿಯಿಂದ ಮುಂಬಯಿಯ ಕಲಾಶಾಲೆಗೆ ಸೇರಬೇಕೆಂದು ಬಯಸಿದರು. ಅದೂ ಕೂಡಿ ಬಂತು. ಇದೇ ಸಮಯ ಭಾರತದ ಮಹೋನ್ನತ ಕಲಾವಿದ ಡಾ|| ಎಮ್.ವಿ. ಮಿಣಜಗಿಯವರು ಹುಬ್ಬಳ್ಳಿಗೆ ಬಂದು ಕಲಾಮಂದಿರವನ್ನು ಸರಾಫಗಟ್ಟಿಯ ಸಿಂಧಗಿಯವರ ಕಟ್ಟಡದ ಅಟ್ಟದ ಮೇಲೆ ಆರಂಭಿಸಿದರು. ಅವರ ನೆರವಿನಿಂದ ಬಸವರಾಜರು ಮುಂಬಯಿಯ ಸರ್. ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಪೇಯಿಂಟಿಂಗ ಪದವಿಯನ್ನು ೧೯೭೪ರಲ್ಲಿ ಸಂಪಾದಿಸಿದರು. ೧೦-೩-೧೯೫೫ರಲ್ಲೆ ಹುಬ್ಬಳ್ಳಿಯ ಕಲಾಮಂದಿರದಲ್ಲಿ ಉಪನ್ಯಾಸಕರಾಗಿ ನೇಮಕರಾಗಿದ್ದರು. ಕಲೆಗಾಗಿ ಅವರ ಹೋರಾಟ ಆಗ ಪ್ರಾರಂಭವಾಯಿತು. ಡಾ|| ಮಿಣಜಗಿಯವರ ಶೈಲಿಯನ್ನು ಅಳವಡಿಸಿಕೊಂಡು ಕಲಾಶಾಲೆಗಾಗಿ, ವಿದ್ಯಾರ್ಥಿಗಳಿಗಾಗಿ ಪ್ರಶಂಸನೀಯ ಕಾಯಕ ಮಾಡುತ್ತಿದ್ದಂತೆ ಅವರ ದೈವಿದತ್ತವಾದ ಕಲೆಯು ಅವರ ಬದುಕಿನ ಅವಿಭಾಜ್ಯ ಅಂಗವಾಯಿತು.

## ತಾನೇ ಗುರುವಾದಾಗ

ಶ್ರೀ ಬಸವರಾಜ ಹಳಿಜೋಳರ ಕಲಾಭಿಮಾನ ಹಾಗೂ ಶಿಷ್ಯ ಪ್ರೇಮ ಕುರಿತು ಇಲ್ಲಿ ಒಂದು ಸಂದರ್ಭವನ್ನು ವಿಶ್ಲೇಶಿಸಬಹುದು.

ಈ ಗ್ರಂಥದ ಲೇಖಕ ಶ್ರೀ ಆರ್.ಜಿ. ರಾಯಕರರು ೧೯೫೬ರಲ್ಲಿ ಹುಬ್ಬಳ್ಳಿಯ ಕಲಾಮಂದಿರದ ಮುಖಾಂತರ ಮುಂಬಯಿಯ ಸರ್.ಜೆ.ಜೆ.ಸ್ಕೂಲ್ ಆಫ್ ಆರ್ಟ್ ಶಾಲೆಯಲ್ಲಿ ನಡೆಯುವ ಆರ್ಟ್ ಮಾಸ್ಟರ್ ಪರೀಕ್ಷೆಗೆ ಕೂಡಲು ವ್ಯಾಸಂಗ ಮಾಡಲು ಸೇರ್ಪಡೆಯಾದಾಗ ಅವರಿಗೆ ಬಸವರಾಜರೇ ಕಲಾಗುರುಗಳಾಗಿದ್ದರು. ಆತ್ಮೀಯರು ಹಾಗು ಒಳ್ಳೆಯ ಸ್ನೇಹಿತರು ಆಗಿದ್ದ ಬಸವರಾಜ ಹಳಿಜೋಳ ಅವರನ್ನು ಹತ್ತಿರದಿಂದ ಬಲ್ಲವರಾದ ಲೇಖಕರ ಮಾತು ಅವರ ಪ್ರಾಮಾಣಿಕ ಅನಿಸಿಕೆ.

ಕರ್ನಾಟಕದ ಕಲಾ ಪ್ರಪಂಚದಲ್ಲಿ ಅವರಿಗೆ ಸಿಗಬೇಕಾದ ಯೋಗ್ಯ

ಸ್ಥಾನ ಸಿಗಲಿಲ್ಲವೆಂಬ ಕೊರಗು ಈ ಲೇಖಕನಿಗಿದೆ. ಏಕೆಂದರೆ ಈ ಲೇಖಕನಷ್ಟು ನಿಕಟವರ್ತಿಯಾಗಿ ಅವರನ್ನು ಅರಿತವರು ವಿರಳ. ಅವರ ಪರಿಸರವೇ ಒಂದು ಕಲಾಕೇಂದ್ರ. ಶಿಷ್ಯರನ್ನು ಕಲಾ ಸಂಪನ್ನರನ್ನಾಗಿ ಮಾಡಲು ಅವರು ಯಾವ ಸಮಯದಲ್ಲಿಯೂ ಸಿದ್ಧರಿದ್ದರು. ಬಣ್ಣಗಳೊಡನೆ ಆಟವಾಡಿದಂತೆ ಅವರ ಕುಂಚ ತಿರುವುತ್ತಿತ್ತು. ಚಿತ್ರವನ್ನು ಮೂಡಿಸುತ್ತಿತ್ತು. ನೆರಳು-ಬೆಳಕುಗಳ ಪ್ರಮಾಣವನ್ನು ಗ್ರಹಿಸಿದ ಅವರಿಗೆ ಚಿತ್ರಕಲೆಯಲ್ಲಿ ಪರಿಪೂರ್ಣತೆಯನ್ನು ತಂದದ್ದು ದೃಶ್ಯಗಳ ಕುರಿತು ಪರಿಸರವು ಅವರ ಹೃದಯದಲ್ಲಿ ಮಾಡಿಸುತ್ತಿದ್ದ ಸ್ಪಂದನ. ಅವರ ಕೈಚಳಕದ ವೇಗವು ಅದಕ್ಕೂ ಮಿಗಿಲೆನಿಸಿ ಅನೇಕರಿಗೆ ಆಶ್ಚರ್ಯವನ್ನುಂಟು ಮಾಡುತ್ತಿತ್ತು. ಅವರು ಸಿದ್ಧಹಸ್ತ ಕಲಾವಿದರಾಗಿದ್ದರು. ಅವರ ಕಲಾಕೃತಿಯಲ್ಲಿ ನೈಪುಣ್ಯತೆಯನ್ನು ಸೃಜನಶೀಲತೆಯನ್ನು ಕಾಣಬಹುದು.

## ಶ್ರೀ ಬಸವರಾಜರ ಕಲಾ ದೃಷ್ಟಿ

ಶ್ರೀ ಬಸವರಾಜ ಹಳಿಜೋಳರು ಸೃಜನಾತ್ಮಕ, ಸೂಕ್ಷ್ಮ ಕಲಾ ನಿಪುಣರಾಗಿದ್ದರು. ಅವರ ಚಿತ್ರಗಳಲ್ಲಿ ಕಲಾತ್ಮಕವಾದ ಹಾವ-ಭಾವ-ಭಂಗಿ-ರಸಗಳು ಸ್ಪಷ್ಟವಾಗಿ ಗೋಚರಿಸುತ್ತಿದ್ದವು ಹಾಗೂ ಬಣ್ಣಗಳ ಹೊಂದಾಣಿಕೆಯು ನೋಡುವವರಿಗೆ ಆನಂದವನ್ನುಂಟು ಮಾಡುತ್ತಿತ್ತು. ಲಯ ಮತ್ತು ಬಣ್ಣಗಳ ಆಳವಾದ ಜ್ಞಾನದಿಂದ ಹೃದಯ ಮತ್ತು ಬುದ್ಧಿಗಳಿಗೆ ತಟ್ಟುವಂತಹ ಕಲಾಕೃತಿಗಳನ್ನು ನಿರ್ಮಿಸಿದರು.

''ಶ್ರೇಷ್ಠವಾದ ಕಲೆ ಎಂದೂ ಹಳೆಯದಾಗುವುದಿಲ್ಲ'' ಕಲಾವಿದನಲ್ಲಿ ವೈಚಾರಿಕ ದೃಷ್ಟಿ ಎಷ್ಟು ಬೆಳೆಯುತ್ತದೋ, ಅಷ್ಟು ಗಾಢವಾದ ಚಿತ್ರ ರಚಿಸುತ್ತಾನೆ. ಅದು ನಿತ್ಯ ನೂತನವಾಗಿರುತ್ತದೆ ಎಂದು ಆಧುನಿಕ ಕಲೆಯ ಬಗ್ಗೆ ಕೇಳಿದಕ್ಕೆ ಬಸವರಾಜರ ಪ್ರತಿಕ್ರಿಯೆ ಇದು.

ಛಾಯಾಗ್ರಹಣದಲ್ಲಿ ಸಹಾ ಅವರು ಕುಂಚದಷ್ಟೇ ಹಿಡಿತ ಸಾಧಿಸಿದ್ದರು. ತಾವು ಕಂಡ ಸುಂದರ ಸನ್ನಿವೇಶಗಳನ್ನು ನಿಸರ್ಗ ದೃಶ್ಯಗಳನ್ನು ತಮ್ಮ ಕ್ಯಾಮರಾದಲ್ಲಿ ಸೆರೆ ಹಿಡಿದು ಪ್ರದರ್ಶನ ಮಾಡಿದ್ದು ಇದೆ. ಇದು ಅಲ್ಲದೆ

ಅವರು ಸ್ವತಃ ತಂಬೂರಿಯ ಸಂಗಡ ತಾಸುಗಟ್ಟಲೆ ಸಂಗೀತ ಹಾಡುತ್ತಿದ್ದರು. ಸಂಗೀತವೂ ಕರಗತವಾಗಿತ್ತು. ಗುರುಗಳಾದ ಮಿಣಜಗಿಯವರು ಸಂಗೀತ ಹಾಡುವಾಗ ಸಮರ್ಥ ರೀತಿಯಲ್ಲಿ ತಂಬೂರಾ ಸಾಥ್ ನೀಡುತ್ತಿದ್ದರು. ವರ್ಷಕ್ಕೊಮ್ಮೆ ತಪ್ಪದೇ ವಿದ್ಯಾರ್ಥಿಗಳು ರಚಿಸಿದ ವಿವಿಧ ಕಲಾಚಿತ್ರ ಪ್ರದರ್ಶನ ಏರ್ಪಡಿಸಿ, ಬಣ್ಣದ ಲೋಕದ ಸಾಧನೆಗಳನ್ನು ಜನತೆಯ ಮುಂದೆ ಇಡುತ್ತಿದ್ದರು. ಧಾರವಾಡ, ಹುಬ್ಬಳ್ಳಿ ಪ್ರೇಕ್ಷಕರಿಗಂತೂ ಇವು ಬಹು ಅಪರೂಪದ ಆನಂದವನ್ನು ಕೊಡುವ ಸಂದರ್ಭಗಳಾಗಿದ್ದವು ಮತ್ತು ಜನಸಾಮಾನ್ಯರಲ್ಲಿ ಕಲೆಯ ಬಗ್ಗೆ ಆಸಕ್ತಿಯನ್ನುಂಟು ಮಾಡುತ್ತಿತ್ತು. ಬಸವರಾಜರು ತಮ್ಮ ಕಲಾಮಂದಿರವನ್ನು ಒಂದು ನಾಡಿನ ಕಲಾ-ಸಾಂಸ್ಕೃತಿಕ ಕೇಂದ್ರವಾಗಿ ಕಟ್ಟಿದ್ದು ಗಮನಿಸಬೇಕಾದ ಸಂಗತಿ. ಈ ರೀತಿ ಸೌಹಾರ್ದಯುತವಾದ ನಿರಂತರ ಸಂಪರ್ಕದಿಂದ ಸಾರ್ವಜನಿಕರಲ್ಲಿ ಪ್ರಶಂಸೆಯ ಮಾತು ಕೇಳಿ ಬರುತ್ತಿತ್ತು. ಎಲ್ಲರ ಮೆಚ್ಚುಗೆಗೂ ಪಾತ್ರವಾಗಿತ್ತು.

## ಕಲಾ ಮಂದಿರದ ಪ್ರಾಚಾರ್ಯರಾಗಿ

ಡಾ॥ ಎಮ್. ವಿ. ಮಿಣಜಗಿಯವರು ಕಲಾಮಂದಿರದ ಪ್ರಾಚಾರ್ಯ ಸ್ಥಾನಂದಿದ ನಿವೃತ್ತರಾದಾಗ ತಮ್ಮ ಶಿಷ್ಯ ಬಸವರಾಜ ಹಳಿಜೋಳ ಅವರಿಗೆ ೩೦-೯-೧೯೬೫ರಲ್ಲಿ ಪ್ರಾಚಾರ್ಯರಾಗಿ ಬಡ್ತಿಯನ್ನು ನೀಡಿದರು. ಅವರು ಈ ಹುದ್ದೆ ವಹಿಸಿಕೊಂಡ ಮೇಲೆ ಕಲೆಗೂ ಬದುಕಿಗೂ ಒಂದು ನಿಶ್ಚಿತ ಸ್ಥಾನ ಹಾಗೂ ರೂಪಗಳು ಬಂದವು. ಪ್ರಾಚಾರ್ಯರಾದಮೇಲೆಯೂ ವಿದ್ಯಾರ್ಥಿಗಳ ಸಂಗಡವೇ ಇದ್ದು ಅವರು ಬಿಡಿಸುವ ಚಿತ್ರಗಳಲ್ಲಿನ ತಪ್ಪುಗಳನ್ನು ಕ್ರಮಬದ್ಧವಾಗಿ ತಿದ್ದಿ ಕಲಿಯಲು ಆಸ್ಪದ ಮಾಡಿಕೊಡುತ್ತಿದ್ದರು. ನೀರಿನಿಂದ ಕಾಗದ ತೊಳೆದ ''ವಾಶ್ ಮೆಥೆಡ್ ಜಲವರ್ಣದ'' ಬಗ್ಗೆ ಕಲಿಸುವ ರೀತಿ ಹೊಸ ಚೈತನ್ಯ ಕೊಡುತ್ತಿತ್ತು. ಹೊಸ ಹೊಸ ಪದ್ಧತಿಗಳನ್ನು ಹೇಳಿಕೊಡುತ್ತಿದ್ದರು. ಕಲಾ ವಿದ್ಯಾರ್ಥಿಗಳೆಂದರೆ ಆಯ್ತು, ಅವರ ಅಭ್ಯಾಸಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧ. ರಜೆಯಲ್ಲಿ ಸಹಾ ವಿದ್ಯಾರ್ಥಿಗಳಿಗೆ ಕಲಿಯಲು ಆಸ್ಪದ ಮಾಡಿಕೊಡುತ್ತಿದ್ದರು. ಸಹೃದಯಿ, ಸರಳ ಸ್ವಭಾವದ,

ಸಂಘಜೀವಿ ಬಸವರಾಜರು ವಿದ್ಯಾರ್ಥಿಗಳ ಮನವನ್ನು ಸುಲಭವಾಗಿ ಗೆಲ್ಲುತ್ತಿದ್ದರು. ತಮ್ಮ ಗುರುಗಳಿಗೆ ಅವರು ನೀಡುತ್ತಿದ್ದ ಗೌರವವನ್ನು ತಮ್ಮ ಶಿಷ್ಯರಿಂದ ತಾವೂ ಪಡೆಯುತ್ತಿದ್ದರು.

ಹಿರಿಯ ಹುದ್ದೆಗೆ ಬಂದ ಮೇಲೆ ಕಲಾವಿದರ ಸ್ನೇಹವೂ ಬೆಳೆಯಿತು. ಅದೊಂದು ಪರಂಪರೆಯೇ ನಿರ್ಮಾಣವಾಯಿತು. ಇದೇ ಕಲಾಮಂದಿರ ಇಂದು ವಿಜಯ ಮಹಾಂತೇಶ ಮಹಾ ವಿದ್ಯಾಲಯವಾಗಿ ಮಾರ್ಪಟ್ಟಿದೆ. ಚಿಟಗುಪ್ಪಿ ಆಸ್ಪತ್ರೆಯ ಆವರಣದಲ್ಲಿ ಹೊಸ ಕಟ್ಟಡ ನಿರ್ಮಾಣವಾಗಿದೆ. ಇಂದು ಡಾ|| ಮಿಣಜಗಿಯವರ ಮಹಾವಿದ್ಯಾಲಯ ಈ ಸ್ಥಿತಿಗೆ ಏರಲು ಕಾರಣರಾದವರು ಶ್ರೀ ಬಸವರಾಜ ಹಳಿಜೋಳ ಪ್ರಾಚಾರ್ಯರು. ಅವರು ಅದೇ ಶಾಲೆಯ ಶಿಷ್ಯ, ಗುರು ಹಾಗೂ ಪ್ರಾಚಾರ್ಯರು. ಯಾವ ಪ್ರಚಾರ-ಆಡಂಬರಗಳಿಗೆ ಮಾರು ಹೋಗದೆ, ಪ್ರಚಾರ ಮಾಧ್ಯಮದಿಂದ ದೂರವಿದ್ದು, ಕಲೆಗಾಗಿ ತಮ್ಮ ಬದುಕನ್ನು ಮುಡಿಪಾಗಿಟ್ಟ ಬಸವರಾಜರನ್ನು ಎಲ್ಲರೂ ತುಂಬು ಹೃದಯದಿಂದ ನೆನೆಯುತ್ತಾರೆ.

ಕಲಾವಿದರು ತೊಂದರೆಯಲ್ಲಿದ್ದರೆ ಅಂಥವರನ್ನು ಹುಡುಕಿ ನೆರವಾಗುವುದು ಅವರ ಬಯಕೆ. ಕಲಾ ವಿದ್ಯಾರ್ಥಿಗಳನ್ನು ವಿವಿಧ ಸ್ಥಳಗಳಿಗೆ ಕರೆದುಕೊಂಡು ಹೋಗಿ ಪ್ರಕೃತಿಯ ವರ್ಣಚಿತ್ರ ಬಿಡಿಸುವ ವಿಧಾನ-ಪೆನ್ಸಿಲ್ ಸ್ಕೆಚ್‌ನಿಂದ ಹಿಡಿದು, ವರ್ಣ ಸಂಯೋಜನೆಯವರೆಗೆ ಮಾರ್ಗದರ್ಶನ ನೀಡಿ ಚಿತ್ರವು ಪೂರ್ಣಗೊಂಡ ನಂತರ ನೋಡಿ ತಾವು ಸಂತೋಷ ಪಟ್ಟು ವಿದ್ಯಾರ್ಥಿಗಳಿಗೂ ಬೆನ್ನು ಚಪ್ಪರಿಸಿ, ತನ್ನಲಿದ್ದ ಕಲಾರಚನಾ ವಿದ್ಯೆಯನ್ನು ವಿದ್ಯಾರ್ಥಿಗಳಿಗೆ ಧಾರೆ ಎರೆದರು. ಅಷ್ಟೇ ಅಲ್ಲ ಕಲಾಶಾಲೆಯ ಫೀಜ್‌ನ್ನು ಯಾರಿಂದಲೂ ಒತ್ತಾಯದಿಂದ ಪಡೆಯದೆ ಕಲಾವಿದರು ಪ್ರತಿಕ್ಷಣವೂ ಅವರನ್ನು ಸ್ಮರಿಸುವಂತೆ ಮಾಡಿದರು. ಹೀಗೆ ವಿದ್ಯಾರ್ಥಿಗಳ ಕಷ್ಟ ಸುಖ ಸಂತೋಷಗಳಲ್ಲಿ ಪಾಲ್ಗೊಳ್ಳುವ ಸಹೃದಯ ಪ್ರಾಚಾರ್ಯರಾಗಿದ್ದರು ಬಸವರಾಜರು.

## ಬಸವರಾಜರ ಕೊನೆಯ ದಿನಗಳು

ಈ ಸಂಸ್ಥೆಯ ಶ್ರೇಯೋಭಿವೃದ್ಧಿಗೆ ಶ್ರೀ ಬಸವರಾಜ ಅವರ ಕೊಡುಗೆ ಅಪಾರವಾದದ್ದು. ಇದೇ ಕಲಾ ಮಂದಿರದಲ್ಲಿ ೩೪ ವರ್ಷಗಳ ಸೇವೆ ಸಲ್ಲಿಸಿದ ಅವರು ೧೪ ವರ್ಷಗಳು ಪ್ರಾಚಾರ್ಯರಾಗಿಯೇ ದುಡಿದಿದ್ದಾರೆ. ಅವರ ಪ್ರಾಮಾಣಿಕ, ದಕ್ಷ ಆಡಳಿತ, ತಮ್ಮದೇ ಆದ ಶೈಲಿ ರೂಢಿಸಿಕೊಂಡ ಅವರ ಪಾಠ ಪ್ರವಚನದ ವಿಧಾನ ಮತ್ತು ವಿದ್ಯಾರ್ಥಿಗಳೊಡನೆ ಬೆಳೆಸಿಕೊಂಡ ಅವರ ಆತ್ಮೀಯತೆಗಾಗಿ ಶ್ರೀ ಬಸವರಾಜ ಹಳಿಜೋಳ ಅವರು ವಿದ್ಯಾರ್ಥಿಗಳ ಪ್ರೀತಿ, ಗೌರವ ವಿಶ್ವಾಸಕ್ಕೆ ಪಾತ್ರರಾಗಿದ್ದರು. ದಿನಾಂಕ ೩-೭-೧೯೭೯ರಂದು ಕಲಾಮಂದಿರದ ಪ್ರಾಚಾರ್ಯ ಹುದ್ದೆಯಿಂದ ನಿವೃತ್ತರಾದರು. ಡಾ|| ಮಿಣಜಗಿ ಕಲಾಮಂದಿರವನ್ನು ೧೯೬೭ರಲ್ಲಿ ಮಹಾವಿದ್ಯಾಲಯವನ್ನಾಗಿ ಪರಿವರ್ತಿಸಲು ಹಗಲಿರುಳು ದುಡಿದು ತಮ್ಮ ಕನಸನ್ನು ನನಸನ್ನಾಗಿ ಮಾಡಿದರು. ಅವರು ಸಂತೃಪ್ತ ಕರ್ಮಯೋಗಿಯಾಗಿದ್ದು ದಿನಾಂಕ ೧೪-೧-೧೯೮೨ರಲ್ಲಿ ಹುಬ್ಬಳ್ಳಿಯಲ್ಲಿ ನಿಧನ ಹೊಂದಿದಾಗ ಅವರು ಬಿಟ್ಟು ಹೋದ ದೊಡ್ಡ ಆಸ್ತಿಯೆಂದರೆ ಪತ್ನಿ ಸುಗಂಧವ್ವ ಮತ್ತು ಒಂಭತ್ತು ಮಕ್ಕಳ ದೊಡ್ಡ ಕುಟುಂಬ ಹಾಗೂ ಬಡತನ. ಪ್ರಪಂಚದ ಅನೇಕ ಕಲಾವಿದರು ಪಡೆದ ನಿರಂತರ ದುರಂತದ ಕತೆ ಇದು. ಲಕ್ಷ್ಮೀ-ಸರಸ್ವತಿಯರು ಕಲಾಜೀವನದ ಮಟ್ಟಿಗಾದರೂ ತಮ್ಮೊಳಗಿನ ವೈಮನಸ್ಸನ್ನು ಮರೆತರೆ ಪ್ರಪಂಚಕ್ಕೆ ಅದೊಂದು ಮಹಾಯುಗವೆನಿಸೀತು.

## ಕಲಾಭಿನಂದನೆ

ದಿ. ಬಸವರಾಜ ಹಳಿಜೋಳರ ಕಲಾ ನೈಪುಣ್ಯತೆ ಕುರಿತು ಒಂದು ಮಾತನ್ನು ಇಲ್ಲಿ ಸ್ಮರಿಸಲೇ ಬೇಕು. ಅವರ ಚಿತ್ರರಚನೆಯಲ್ಲಿ ಯಾವಾಗಲೂ ವೈವಿಧ್ಯತೆ, ಸಂಯೋಜನಾ ಚತುರತೆ ಪ್ರಮುಖ ಪಾತ್ರ ವಹಿಸಿದರೆ, ರೇಖಾಚಿತ್ರ, ಸ್ಮರಣ ಚಿತ್ರ, ತೈಲಚಿತ್ರ, ಜಲವರ್ಣ ಹಾಗೂ ಪೆನ್ಸಿಲ್ ಮಾಧ್ಯಮ' ನಿಸರ್ಗ ಚಿತ್ರಗಳ ರಚನೆಯಲ್ಲಿ ಅವರು ಪ್ರಭುತ್ವವನ್ನು ಸ್ಥಾಪಿಸಿದ್ದರು. ಅವರ

ಕಲಾಜೀವನಕ್ಕೆ ಮೆರಗು ನೀಡಿದ ಅವರ ಮೇರು ಕೃತಿಗಳೆಲ್ಲ ವೈಶಿಷ್ಟ್ಯಪೂರ್ಣವಾಗಿದ್ದು ಮೊದಲ ನೋಟಕ್ಕೆ ಮನಸೂರೆಗೊಳ್ಳುವ ಶಕ್ತಿ ಸಾಕ್ಷಾತ್ಕಾರತೆ ಪಡೆದಿವೆ.

ಒಮ್ಮೆ ಮಾಜಿ ಶಿಕ್ಷಣ ಮಂತ್ರಿಗಳಾದ ಶ್ರೀ ಎಸ್. ಆರ್. ಕಂಠಿಯವರು ಹುಬ್ಬಳ್ಳಿಯಲ್ಲಿ ನಡೆದ ಸಾಮೂಹಿಕ ಚಿತ್ರಕಲಾ ಪ್ರದರ್ಶನದಲ್ಲಿ ಬಸವರಾಜರ ಚಿತ್ರಗಳನ್ನು ಕಂಡು ಮಂತ್ರ ಮುಗ್ಧರಾಗಿ ಭುಜ ಚಪ್ಪರಿಸಿ ಪ್ರಶಂಶಿಸಿದರು.

ಕನ್ನಡ ಕಾದಂಬರಿ ಸಾರ್ವಭೌವು ದಿ. ಅ. ನ. ಕೃಷ್ಣರಾಯರು ಹುಬ್ಬಳಿಗೆ ಆಗಮಿಸಿದಾಗ ಇವರ ಚಿತ್ರಕಲೆ ನೋಡಿ ಸಂತೋಷಪಟ್ಟು ''ನಿಮ್ಮ ಕಲಾ ಜೀವನ ಅಮೋಘವಾದದ್ದು'' ಎಂದು ಹೇಳಿ ಬೆನ್ನು ಚಪ್ಪರಿಸಿದ್ದು ಅವರಿಗೆ ತುಂಬಾ ಉತ್ತೇಜನ ಕೊಟ್ಟಿತು.

ಒಮ್ಮೆ ಬೆಂಗಳೂರಿನ ಕಲಾವಿದ ಅ. ನ. ಸುಬ್ಬರಾವ್ ಮತ್ತು ಡಾ|| ಡಿ. ಎಸ್. ಕರ್ಕಿ ಇವರ ಕಲಾಕೃತಿಗಳನ್ನು ಕಲಾತಪಸ್ಸಿನ ನಿಷ್ಠೆಯನ್ನು ಕಂಡು ಪುಳಕಿತರಾಗಿದ್ದರು. ಇನ್ನೊಂದು ಸಲ ಮಾಜಿ ಶಿಕ್ಷಣಮಂತ್ರಿ ಅಣ್ಣಾರಾವ್ ಗಣಮುಖಿಯವರು ಇವರ ಕಲಾಕೃತಿಗಳನ್ನು ಕಂಡು ಹೃದಯಪೂರ್ವಕವಾಗಿ ಅಭಿನಂದಿಸಿದರು.

ಹೀಗೆ ಎಲ್ಲರ ಮನ್ನಣೆಗೆ ಪಾತ್ರರಾದ ಧೀಮಂತ ಕಲಾವಿದ ಬಸವರಾಜ ಹಳಿಜೋಳ ಅವರ ಕುಂಚ ನಮ್ಮೆದುರು ಜೀವ ತಳೆದು ಕ್ಯಾನವಾಸ ಬಟ್ಟೆಯ ಮೇಲೆ ಕುಣಿಯುತ್ತಿರುವಂತ ಭ್ರಮೆ ನಮಗುಂಟಾಗುವುದು. ಅದರಲ್ಲೂ ವರ್ಣ ಸಂಯೋಜನೆಯ ಅವರ ಜಾಣ್ಮೆ ಯಾರೂ ತಲೆದೂಗುವಂಥದು.

ಸುಪ್ರಸಿದ್ಧ ಪತ್ರಕರ್ತ ಡಾ|| ಪಾಟೀಲ ಪುಟ್ಟಪ್ಪನವರು ಶ್ರೀ ಬಸವರಾಜರ ಕಲಾ ಪ್ರೌಢಿಮೆಯನ್ನು ನೋಡಿ ತಾವು ಬರೆದ ''ಬೆಳೆದ ಬದುಕು'' ಎಂಬ ಪುಸ್ತಕದಲ್ಲಿ ಹಾಗೂ ಅವರ ಪ್ರಪಂಚ, ವಿಶ್ವವಾಣಿ ಪತ್ರಿಕೆಯಲ್ಲಿ ತುಂಬಾ ಹೊಗಳಿದ್ದಾರೆ. ಪ್ರೊ. ಎಂ. ಸಿ. ಹಿಪ್ಪರಗಿ, ಶ್ರೀ ಆರ್. ಜಿ.

ರಾಯಕರ, ಶ್ರೀ ಪಿ.ಆರ್. ತಿಪ್ಪೇಸ್ವಾಮಿ, ಶ್ರೀ ಓಂಕಾರ ಪಿ. ಕಾಕಡೆ, ಹೀಗೆ ಅನೇಕ ಗಣ್ಯರು ಶ್ರೀ ಬಸವರಾಜರ ಕಲಾ ನೈಪುಣ್ಯದ ಬಗ್ಗೆ ಲೇಖನ ಬರೆದಿರುವರು. ಇವುಗಳ ಕೆಲವು ಮಾಹಿತಿ ಈ ಕೃತಿಯಲ್ಲಿ ಉಪಯೋಗಿಸಿದ್ದು ಲೇಖಕರು ಅವರೆಲ್ಲರಿಗೂ ಋಣಿ.

೧೯೬೪ರಲ್ಲಿ ಉಡುಪಿಯಲ್ಲಿ ನಡೆದ ರಾಜ್ಯ ಚಿತ್ರಕಲಾ ಶಿಕ್ಷಕರ ರಾಜ್ಯ ಸಮ್ಮೇಳನದಲ್ಲಿ ಒಬ್ಬ ನಾಟ್ಯಾಚಾರ್ಯರನ್ನು ಕೂಡ್ರಿಸಿ ಕಲಾಪ್ರಾತ್ಯಕ್ಷಿಕೆಗಳನ್ನು ಶ್ರೀ ಬಸವರಾಜರಿಂದ ಮಾಡಿಸಲಾಯಿತು. ಪ್ರೇಕ್ಷಕರು ಕುತೂಹಲದಿಂದ ಈಕ್ಷಿಸುತ್ತಿದ್ದರು. ಬ್ರಷ್‌ನಲ್ಲಿಯೇ ವ್ಯಕ್ತಿಯ ಭಾವಚಿತ್ರ ಹಳದಿ ಬಣ್ಣದ ರೇಖೆಯಿಂದ ತಕ್ಷಣ ಬಿಡಿಸಿ, ಅದೇ ಗಳಿಗೆಯಲ್ಲಿ ಬದಲಾಯಿಸುವ ಬಣ್ಣ ಮತ್ತು ಕುಂಚ, ಕ್ಯಾನವಾಸ್ ಮೇಲೆ ಪಳಪಳನೆ ಹೂ ಉದುರಿದಂತೆ ಎದುರಿಗೆ ಕುಳಿತ ನಾಟ್ಯಾಚಾರ್ಯರ ಮುಖವನ್ನು ೪೦ ನಿಮಿಷದಲ್ಲಿ ಬಿಡಿಸಿದ್ದು ನೋಡಿ, ಕರತಾಡನಗಳ ನಡುವೆ, ಜೀವ ತುಂಬಿದ ಚಿತ್ರ, ಇನ್ನೊಬ್ಬ ನಾಟ್ಯಾಚಾರ್ಯರೇ ಎದುರಿಗಿದ್ದಂತೆ ಇತ್ತು ಅದರ ಭಾವ. ಸಮ್ಮೇಳನದ ಉದ್ಘಾಟಕರಾಗಿ ಬಂದ ಮಾನ್ಯ ಶ್ರೀ ಕಂಠಿಯವರು ''ಇವನೊಬ್ಬ ಮರೆಯಬಾರದ ವ್ಯಕ್ತಿ'' ಎಂದು ಮನಸಾರೆ ಹರಿಸಿದರು. ಸಮ್ಮೇಳನದಲ್ಲಿದ್ದ ಮಾನ್ಯ ಪಿ.ಎಮ್. ನಾಡಗೌಡ ಮತ್ತು ಮಾನ್ಯ ಟಿ.ಎಂ.ಎ. ಪೈ ಅವರು ಇವರ ಪ್ರತಿಭೆಗೆ ಶುಭ ಹಾರೈಸಿದರು.

## ಅವರ ಪ್ರಸಿದ್ಧ ಕಲಾಕೃತಿಗಳು

ಕರ್ನಾಟಕದಲ್ಲಿ ಕಲಾವಿದರು ಹೆಚ್ಚು ಕಡಿಮೆ ಪ್ರತಿ ಊರಿನಲ್ಲಿಯೂ ಇದ್ದಾರೆ. ಎರಡೋ ನಾಲ್ಕೋ ಚಿತ್ರ ಬಿಡಿಸಿ ತಾನೇ ಸುಪ್ರಸಿದ್ಧ ಆರ್ಟಿಸ್ಟ್ ಎಂದು ಅವರೇ ಹೇಳಿಕೊಳ್ಳುವವರು. ಇಂದು ಬೇಕಷ್ಟು ಗೋಡೆಗೆ ಜಾಹೀರಾತುಗಳನ್ನು ಯಥಾವತ್ತಾಗಿ ಬರೆಯುತ್ತ ಎಲ್ಲಿಯೋ ಕಣ್ಮರೆಯಾಗುವವರೂ ಇದ್ದಾರೆ. ಸ್ವತಃ ರಾಜಾ ರವಿವರ್ಮರು ಅಂತರಾಷ್ಟ್ರೀಯ ಖ್ಯಾತಿಯ ಚಿತ್ರಕಾರರಾಗಿ ಕರ್ನಾಟಕದಲ್ಲಿ ಬಹುಕಾಲ ಉಳಿದು ಚಿತ್ರಗಳನ್ನು ಬಿಡಿಸಿದರೂ ಮತ್ತೆ ಅಂತಹ ಚಿತ್ರಕಾರರನ್ನು ಅವರು

ಇಲ್ಲಿ ರೂಪಿಸಲಿಲ್ಲ. ಆದರೆ ಕಲಾಪ್ರವೀಣ ಶ್ರೀ ಬಸವರಾಜ ಹಳಿಜೋಳ ಅವರು ಸ್ವತಃ ಒಂದು ಸಾವಿರದಾ ಐನೂರಕ್ಕೂ ಹೆಚ್ಚು ಚಿತ್ರಗಳನ್ನು ಬಿಡಿಸಿದ್ದಲ್ಲದೆ ಅನೇಕ ಕಲಾಕಾರರ ಪರಂಪರೆಯನ್ನು ನಿರ್ಮಾಣ ಮಾಡಿದರು. ಅವರು ಬಣ್ಣದಲ್ಲಿ ಅದ್ದಿದ ಕುಂಚವನ್ನು ಎಳೆದ ಗುರುತುಗಳು ಕಾಣಿಸುವುದೇ ಇಲ್ಲ. ಎದುರಿಗೆ ಕುಳಿತ ವ್ಯಕ್ತಿಯ ಆಕೃತಿಯನ್ನು ಯಥಾ ರೀತಿಯಾಗಿ ಒಡಮೂಡಿಸುವ ಅವರ ಕೈ ಚಳಕ ಹಾಗೂ ಶಕ್ತಿ ಸಂಪನ್ನತೆಯು ಭಾರತದ ಕೆಲವೇ ಕಲಾವಿದರಲ್ಲಿ ಕಂಡು ಬರುತ್ತದೆ. ಸ್ಥಳದಲ್ಲಿಯೇ ಭಾವಚಿತ್ರಗಳನ್ನು ತೈಲವರ್ಣ, ಅಥವಾ ಜಲವರ್ಣಗಳಲ್ಲಿ ೩೦ ರಿಂದ ೪೦ ನಿಮಿಷಗಳಲ್ಲಿ ಬಿಡಿಸುವ ಅವರ ಕೈಚಳಕ ಅವರೊಂದು ಕಂಪ್ಯೂಟರ್ ಆಗಿದ್ದರು ಎಂಬಂತೆ ಭಾಸವಾಗುತ್ತಿತ್ತು. ಜಲವರ್ಣದಲ್ಲಿ ಅನೇಕ ಐತಿಹಾಸಿಕ ಅವಶೇಷಗಳನ್ನು ಚಿತ್ರಿಸಿದ್ದು, ಅದರಲ್ಲಿ ಹಂಪಿ, ಬಾದಾಮಿ, ಬಿಜಾಪುರ, ಲಕ್ಕುಂಡಿ ಮೊದಲಾದವು ಸಮಾವೇಶವಾಗಿದ್ದು ಯಥಾರ್ಥತೆಯನ್ನು ಬಿಂಬಿಸುತ್ತದೆ.

ದಿ. ಬಸವರಾಜರ ಕೆಲವು ಪ್ರಮುಖ ಕಲಾಕೃತಿಗಳನ್ನು ಇಲ್ಲಿ ಉಲ್ಲೇಖಿಸಬಹುದು.

ಸಾವಿತ್ರಿ ಸತ್ಯವಾನ, ಬುದ್ಧ, ಉಮರಖಯ್ಯಾಂ, ಶಕುಂತಲಾ ಅಕ್ಕಮಹಾದೇವಿ, ಕಿತ್ತೂರ ಚನ್ನಮ್ಮ, ಶಿವಾಜಿ, ಗಣಪತಿ ಮೆರವಣಿಗೆ, ವಿಜಯೋತ್ಸವ, ಭೀಮ-ದುರ್ಯೋಧನರ ಗದಾಯುದ್ಧ, ಜೋಳದ ಕಣದಲ್ಲಿ ರೈತರ ಗ್ರಾಮಜೀವನ ಇತ್ಯಾದಿ ಅವರ ಜಲವರ್ಣ ಕಲಾಕೃತಿಗಳು.

ಡಾ॥ ಶಿವರಾಮಕಾರಂತ (ಈ ಚಿತ್ರ ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿದೆ) ಡಾ॥ ವಿ.ಕೃ. ಗೋಕಾಕ, ಡಾ॥ ಎಮ್.ವಿ. ಮಿಣಜಿಗಿ, ಕಲಾವಿದ ಅ.ನ. ಸುಬ್ಬರಾವ್, ಕಲಾವಿದ ಡಿ.ವಿ. ಹಾಲಭಾವಿ, ಡಾ॥ ಡಿ.ಎಸ್. ಕರ್ಕಿ, ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು, ಧಾರವಾಡ, ಶ್ರೀ ಚಂದ್ರಶೇಖರ ಮಹಾ ಸ್ವಾಮಿಗಳು ಹೊಸಪೇಟೆ, ಮಾಜಿ ಮಂತ್ರಿ ಎಸ್.ಆರ್.ಕಂಠಿ, ಬೀಚೀ. ಗೋಕಾಕ ನಾಟಕ ಮಂಡಳಿಯ ಒಡೆಯರಾದ ಹೊಸಮನಿ, ಪ್ರಥಮ ಮೇಯರ್, ಪಿ.ಟಿ. ಹಬೀಬ, ಮೆಡಿಕಲ್ ಕಾಲೇಜಿನ ಡೀನ ಶ್ರೀ ಧರ್ಮವೀರ, ಜೆ.ಪಿ. ಜವಳಿ, ಕೆ.ವಿ. ಇರ್ನಿರಾಯ್, ಎಸ್.ಎಸ್.

ಮಾಟಲಡಿನ್ನಿ, ಎಂ. ಜೀವನ, ಜಗದೀಶ ಮುಂತಾದ ಅನೇಕ ಗಣ್ಯರ ತೈಲ ಚಿತ್ರಗಳು ಸಿದ್ಧಹಸ್ತ ಕೃತಿಗಳಾಗಿ ಶಾಶ್ವತ ನೆನಪುಗಳಾಗಿ, ಅನೇಕ ಪ್ರಮುಖರ ಮನೆಗಳಲ್ಲಿ ಮತ್ತು ಸಂಘ-ಸಂಸ್ಥೆಗಳಲ್ಲಿ, ಕಲಾಮಂದಿರ ಹಾಗೂ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಇದ್ದು, ಇಂದಿಗೂ ಅವು ನೋಡುವವರನ್ನು ಮಂತ್ರ ಮುಗ್ಧರನ್ನಾಗಿ ಮಾಡುವ ಅಪೂರ್ವ ಕೃತಿಗಳಾಗಿವೆ. ಬಸವರಾಜರ ಕಲಾಪ್ರೌಢಿಮೆಯ ಕೆಲವು ಅಪರೂಪದ ಮಾದರಿಗಳನ್ನು ಈ ಬರಹದೊಂದಿಗೆ ಓದುಗರ ಅರಿವಿಗಾಗಿ ಕೊಡಲಾಗಿದೆ.

## ಸಾಧನೆಯ ಪ್ರತಿರೂಪರಾದ ಶಿಷ್ಯ ಸಮುದಾಯ

ಕಲಾವಿದ ಬಸವರಾಜರಿಗೆ ತಾವು ಸಾಧಿಸಿದ ಸಿದ್ಧಿಯನ್ನು ತಾವೇ ಇಟ್ಟುಕೊಳ್ಳದೆ ತನ್ನ ಶಿಷ್ಯ ಸಮುದಾಯದಲ್ಲಿ ಮುಂದರಿಸುವ ವಿಚಾರವಿದ್ದುದರಿಂದ, ಅವರು ತನ್ನ ಸಾಧನೆಯನ್ನು ಅವರಿಗೆ ಪೂರ್ಣವಾಗಿ ಧಾರೆ ಎರೆದರು. ಒಂದು ಜ್ಯೋತಿಯು ಅನೇಕ ದೀಪಗಳನ್ನು ಬೆಳಗುವಂತೆ ತಮ್ಮ ಶಿಷ್ಯರನ್ನೂ ಖ್ಯಾತ ಕಲಾವಿದರಾಗುವಂತೆ ಮಾಡಿದ್ದು- ಬಸವರಾಜರ ಅಪೂರ್ವ ಸಾಧನೆಯಾಗಿದ್ದು ಅವರ ಹಿರಿತನಕ್ಕೆ ಮೂಕಸಾಕ್ಷಿಯಾಗಿ ನಿಂತಿದೆ. ತಮ್ಮ ಶಿಷ್ಯರ ಪ್ರತಿಭೆ ಮತ್ತು ಕೀರ್ತಿಗೆ ಸಂತೋಷಪಡುವುದು ಬಸವರಾಜ ಹಳಿಜೋಳ ಆಚಾರ್ಯರ ಸಂತೋಷವಾಗಿತ್ತು. ಅಂಥ ಕೆಲ ಉದಾಹರಣೆಗಳನ್ನು ಇಲ್ಲಿ ಗಮನಿಸಬಹುದು. ಪ್ರಾಚಾರ್ಯ ದಿ. ಬಸವರಾಜರ ಶಿಷ್ಯರಲ್ಲಿ ಕೆಲವು ಪ್ರಮುಖರನ್ನು ಆಯ್ದು ಇಲ್ಲಿ ಕೊಡಲಾಗಿದೆ.

ಶ್ರೀಯುತರಾದ ಎಮ್.ಸಿ. ಚೆಟ್ಟಿ, ಖ್ಯಾತ ಕಲಾವಿದರು ಮತ್ತು ಉಪನ್ಯಾಸಕರು, ವ್ಹಿ.ಬಿ. ಹಿರೇಗೌಡ, ಪ್ರಿನ್ಸಿಪಾಲರು ಮತ್ತು ಲಲಿತಕಲಾ ಅಕಾಡೆಮಿಯ ರಾಜ್ಯ ಪ್ರಶಸ್ತಿ ವಿಜೇತರು. ಆರ್.ಎಮ್. ಹಡಪದ, ಪ್ರಿನ್ಸಿಪಾಲರು, ರಾಜ್ಯೋತ್ಸವ ಪ್ರಶಸ್ತಿ, ಲಲಿತಕಲಾ ಅಕಾಡೆಮಿಯ ರಾಜ್ಯ ಪ್ರಶಸ್ತಿ ವಿಜೇತರು ಮತ್ತು ಮಾಜಿ ಅಧ್ಯಕ್ಷರು ಹಾಗೂ ನಾಡೋಜ ಪ್ರಶಸ್ತಿ ವಿಜೇತರು. ಶ್ರೀ ಆರ್.ಜಿ. ರಾಯಕರ, ಕರ್ನಾಟಕ ಲಲಿತಕಲಾ ಅಕಾಡೆಮಿಯ ರಾಜ್ಯಪ್ರಶಸ್ತಿ ಮತ್ತು ರಾಜ್ಯೋತ್ಸವ ಪ್ರಶಸ್ತಿ ವಿಜೇತರು.

ಶ್ರೀ ಜಿ. ವಾಯ್. ಹುಬ್ಳಿಕರ, ಖ್ಯಾತ ವ್ಯಂಗ ಚಿತ್ರಕಾರರು, ಕರ್ನಾಟಕ ಲಲಿತಕಲಾ ಅಕಾಡೆಮಿ ರಾಜ್ಯಪ್ರಶಸ್ತಿ ವಿಜೇತರು. ಶ್ರೀ ಪಿ.ಎಸ್. ಹಿರೇಮಠ, ಈ ಕಲಾಮಂದಿರದ ಪ್ರಿನ್ಸಿಪಾಲರು. ಶ್ರೀ ಎಲ್.ಸಿ. ಬೆಲ್ಲದ, ಪ್ರೊ॥ ದಡೂತಿ, ಪ್ರೊ॥ ಜೋಯ್ಸ್, ವಿಜಯ ಹಳಿಜೋಳ (ದಿವಂಗತರ ಮಗ) ಮೊದಲಾದವರು ಪ್ರಸಿದ್ಧರು. ಕಲಾದಾರಿಯಲ್ಲಿ ಯಶಸ್ಸಿನ ಹೆಜ್ಜೆಯನ್ನು ತುಳಿಯುತ್ತಿದ್ದಾರೆ ಮತ್ತು ಚಿತ್ರಕಲಾ ರಂಗವನ್ನು ಶ್ರೀಮಂತಗೊಳಿಸುತ್ತಿದ್ದಾರೆ.

ಇವರ ಆತ್ಮೀಯ ಶಿಷ್ಯ ಶ್ರೀ ಎಮ್.ಸಿ. ಚೆಟ್ಟಿಯವರು ರಾಜ್ಯದ ಖ್ಯಾತ ಕಲಾವಿದರಲ್ಲಿ ಒಬ್ಬರು. ಅವರು ಇಂದಿಗೂ ಯಾವುದೇ ಕಲಾಕೃತಿ ರಚನೆಯ ಆರಂಭಕ್ಕೆ ಮೊದಲು ತಮ್ಮ ಗುರುಗಳಾದ ದಿ. ಬಸವರಾಜರನ್ನು ನಮಿಸಿ, ಸ್ಮರಿಸಿ ಕಲಾಕೃತಿ ಸುರುಮಾಡುವರು. ಅವರಿಂದ ಬಹಳಷ್ಟು ಕಲಿತೆ. ನನ್ನ ಈ ಕಲಾ ಸಾಧನೆಗೆ, ಶ್ರೇಯಸ್ಸಿಗೆ ನನ್ನ ಗುರುವೇ ಕಾರಣವೆಂದು ಹೃದಯಪೂರ್ವಕ ಸ್ಮರಿಸುತ್ತಾರೆ. ಶ್ರೀ ಚೆಟ್ಟಿಯವರ ಕಲಾ ಪ್ರತಿಭೆಯನ್ನು ಅರಳಿಸಲು, ಹಿಗ್ಗಿಸಲು ಇವರು ನೆರವಾದರು. ನೀರೆರೆದರು.

ಶ್ರೀ ಚೆಟ್ಟಿಯವರೊಂದಿಗೆ ಇನ್ನೂ ಅನೇಕ ಕಲಾವಿದರು ಸೇರಿ ಇಂದು ಕಲಾಮಂದಿರವನ್ನು, ತಮ್ಮ ಪರಿಶ್ರಮದಿಂದ ಪ್ರಗತಿಯ ಹಾದಿಯಲ್ಲಿ ಮುನ್ನಡೆಸಲು ಶ್ರಮಿಸುತ್ತಿದ್ದಾರೆ.

## ಅಳಿದ ಪ್ರಾಚಾರ್ಯರಿಗೆ ನಮನ

ಕಲಾಋಷಿ ಪ್ರಾಚಾರ್ಯ ಬಸವರಾಜ ಹಳಿಜೋಳರು ಇನ್ನಿಲ್ಲ. ಅವರು ಪಟ್ಟ ಪರಿಶ್ರಮ, ಅವರ ಹಿರಿತನ, ಕಲೆಗಾಗಿ ಮುಡಿಪಿಟ್ಟ ಅವರ ಇಡೀ ಬಾಳುವೆಯನ್ನು ಸ್ಮರಿಸಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ದಿ. ಬಸವರಾಜ ಮಡಿವಾಳಪ್ಪಾ ಹಳಿಜೋಳ ಅವರಿಗೆ ಮರಣೋತ್ತರ ಪ್ರಶಸ್ತಿ ನೀಡಿ ಗೌರವಿಸಿದೆ. ೧೯೯೧ರಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ಯ ಎಸ್. ಬಂಗಾರಪ್ಪನರ ಅಧ್ಯಕ್ಷತೆಯಲ್ಲಿ ಪೂಜ್ಯ ಶ್ರೀ ವಿರೇಂದ್ರ ಹೆಗ್ಗಡೆ ಅವರಿಂದ ದಿವಂಗತ ಕಲಾವಿದರ ಪರವಾಗಿ ಅವರ ಪತ್ನಿ ಶ್ರೀಮತಿ

ಸುಂಗಧವ್ವ ಅವರು ಪ್ರಶಸ್ತಿ ಸ್ವೀಕರಿಸಿದರು. ದಿವಂಗತ ಕಲಾವಿದ ಶ್ರೀ ಬಸವರಾಜರಿಗೆ ಪ್ರಶಸ್ತಿ ನೀಡುವ ಮೂಲಕ ಅವರ ಕಲಾ ಸೇವೆಯನ್ನು ಗೌರವಿಸಿದ್ದು, ಕಲಾವಿದರು ನಿಧನವಾದ ಹತ್ತು ವರ್ಷಗಳ ನಂತರವಾದರೂ ಅಕಾಡೆಮಿಯು ತನ್ನ ಅಸ್ತಿತ್ವದ ಅವಧಿಯಲ್ಲಿ ಮರಣೋತ್ತರ ಪ್ರಶಸ್ತಿಯನ್ನು ನೀಡಿರುವುದು ಇದೇ ಪ್ರಥಮ ಸಲವಾಗಿದೆ.

ಪ್ರಾಚಾರ್ಯರಿಗೆ ಕೊನೆಯ ನಮನ ಸಲ್ಲಿಸುವ ಮುನ್ನ ಅವರು ಅದ್ದಿದ ಬಣ್ಣ ಕುಂಚದಲ್ಲಿ ಹರಿಯುತ್ತಿದ್ದ ಹಲವು ವರ್ಣಗಳ ಹಿಂದೆ ಅವರ ಹೃದಯವಂತಿಕೆಯ ನೈಜ ಚಿತ್ರವನ್ನು ನಾವು ಅರಿಯಲೇಬೇಕು. ಕಲಾಮಂದಿರದ ಸಂಸ್ಥಾಪಕರಾಗಿದ್ದ ಡಾ॥ ಮಿಣಜಗಿಯವರು ಆತ್ಮೀಯವಾಗಿ ಶ್ರೀ ಬಸವರಾಜರನ್ನು ತಮ್ಮ ಕಲಾಮಂದಿರಕ್ಕೆ ಸೇರಿಸಿಕೊಂಡಿದ್ದರು, ಕಲಾವಿದರನ್ನಾಗಿ, ಪ್ರಾಚಾರ್ಯರನ್ನಾಗಿಯೂ ಮಾಡಿದರು. ಆದರೆ ತಮ್ಮ ಕೊನೆಗಾಲದಲ್ಲಿ ಕಲಾವಿದ ಮಿಣಜಗಿಯವರು ಅನಾಥರಾಗಿದ್ದರು. ಅವರ ಪತ್ನಿ ಬಹಳ ಸಮಯದ ಹಿಂದೆ ತೀರಿಕೊಂಡಿದ್ದರು. ಮಕ್ಕಳಿಲ್ಲದ ಮಿಣಜಗಿಯವರು ರೋಗಪೀಡಿತರಾಗಿ ಹಾಸಿಗೆ ಹಿಡಿದಿದ್ದರು. ಆಗ ಅವರ ಶಿಷ್ಯ ದಿವಂಗತ ಬಸವರಾಜ ಹಳಿಜೋಳರೇ ತಮ್ಮ ಗುರುವನ್ನು ಹುಬ್ಬಳ್ಳಿಯ ಸವಿತಾ ಹೋಟೇಲಿನಲ್ಲಿ ಖೋಲಿ ತೆಗೆದುಕೊಂಡು ಉಳಿಸಿ, ತಂದೆಯಂತೆ ಉಪಚರಿಸಿ, ಬೇಕಾದ ಔಷದೋಪಚಾರ ನೀಡಿ, ವೆಚ್ಚವನ್ನೆಲ್ಲಾ ತಾವೇ ಭರಿಸಿದರು, ಬಸವರಾಜರ ಪತ್ನಿ ಸುಗಂಧವ್ವ ದಿನಾಲು ಊಟ ತಯಾರಿಸಿ ಖೋಲಿಗೆ ತಂದುಕೊಟ್ಟು, ಅವರ ಅಂತ್ಯಕಾಲದಲ್ಲಿ ಪಕ್ಕದಲ್ಲಿಯೇ ನಿಂತು ಕಂಬನಿ ಮಿಡಿದರು. ಇಂತಹ ಕಲಾವಿದ ದಿ. ಹಳಿಜೋಳರು ತಮ್ಮ ಮಟ್ಟಿಗೆ ಸ್ಥಿತ ಪ್ರಜ್ಞರಾಗಿ ಬಾಳಿ ತನಗೂ, ತನ್ನ ಕುಟುಂಬಕ್ಕೂ ಏನನ್ನು ಮಾಡಲಾಗಲಿಲ್ಲಾ. ಇಂದು ಸಮಾಜ ಹಾಗೂ ಸರಕಾರ ಇಂಥ ತಪಸ್ವಿಗಳ ಋಣ ತೀರಿಸದಿದ್ದರೆ ನಾವು ಕೃತಘ್ನರಾಗುತ್ತೇವೆ. ಜನ್ಮದಾತನು ಹೆತ್ತ ತಂದೆ, ಗುರುವು ಲೋಕದ ತಂದೆ. ಬದುಕಿನ ಮಾರ್ಗದರ್ಶಕ. ಇಂತಹ ಕಲಾಗುರು ಪ್ರಾಚಾರ್ಯ ದಿ. ಬಸವರಾಜ ಹಳಿಜೋಳ ಇವರಿಗೆ ಅಂತಿಮ ನಮನ. ಅವರು ಕಣ್ಮರೆಯಾದರೂ ಅವರ ನೆನಪು ಚಿತ್ರಕಲಾ ರಂಗದಲ್ಲಿ ಹಚ್ಚ ಹಸಿರಾಗಿ ಉಳಿದಿದೆ. ಆದ್ದರಿಂದ ಈ ಪುಣ್ಯ ಸ್ಮರಣೆ.

# ಕಲಾಗೌರವ

ಕಲಾಚಾರ್ಯ ಶ್ರೀ ಬಸವರಾಜರು ೧೯೮೨ರಲ್ಲಿ ನಿಧನರಾದರೆಂಬುದು ನಿಜವಾದರೂ, ಅವರು ಬದುಕಿದಾಗಲೇ ಅವರನ್ನು ಅವರ ಕಲೆಯನ್ನು ಗೌರವಿಸುವ ಒಂದೆರಡು ಸನ್ನಿವೇಶಗಳನ್ನು ಇಲ್ಲಿ ಸ್ಮರಿಸಬಹುದು.

೧) ಕಾರವಾರದಲ್ಲಿ ಅಖಿಲ ಭಾರತ ೪೫ನೇ ಕನ್ನಡ ಸಾಹಿತ್ಯ ಸಮ್ಮೇಳನ ೧೯೬೫ರಲ್ಲಿ ನಡೆದಾಗ, ಅದರ ಅಂಗವಾಗಿ ನಡೆದ ಕಲಾ ಪ್ರದರ್ಶನದಲ್ಲಿ ತೈಲ ಚಿತ್ರಗಳಿಗೆ ಪ್ರಶಸ್ತಿ ಮತ್ತು ಬಂಗಾರದ ಪದಕ ನೀಡಿ ಕಡಂಗೋಡ್ಲು ಶಂಕರಭಟ್ಟ ಅವರಿಂದ ಗೌರವಿಸಲಾಯಿತು.

೨) ಶಿರಸಿಯಲ್ಲಿ - ಅಖಿಲ ಭಾರತ ೫೫ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಜರುಗಿದ ಕಲಾಪ್ರದರ್ಶನದಲ್ಲಿ ಶ್ರೀ ಬಸವರಾಜರ ತೈಲವರ್ಣ ಹಾಗೂ ನೀರಬಣ್ಣದ ಕೃತಿಗಳಿಗೆ ಶ್ರೀ ಗೋರೂರು ರಾಮಸ್ವಾಮಿ ಅಯ್ಯಂಗಾರ್ ಅವರಿಂದ ಪ್ರಶಸ್ತಿ ಹಾಗೂ ರಜತ ಪದಕ ನೀಡಿ ಗೌರವಿಸಲಾಯಿತು.

೩) ೧೯೮೩ರಲ್ಲಿ ಕಲಾ ಮಹಾವಿದ್ಯಾಲಯದ ವತಿಯಿಂದ ಹುಬ್ಬಳ್ಳಿಯ ಇಂದಿರಾ ಗಾಜಿನ ಮನೆಯಲ್ಲಿ ದಿ. ಬಸವರಾಜ ಹಳಿಜೋಳ ಇವರ ಕಲಾಕೃತಿಗಳ ಪ್ರದರ್ಶನವು ವೈವಿಧ್ಯತೆಯ ಸಂಗಮವಾಗಿ ಕಿಕ್ಕಿರಿದ ಜನಸಂದಣಿಯಲ್ಲಿ ಸಾಹಿತ್ಯಾಸಕ್ತರ, ಬುದ್ಧಿಜೀವಿಗಳ ಹಾಗೂ ಕಲಾಭಿಮಾನಿಗಳ ಆದರಕ್ಕೆ ಪಾತ್ರವಾಯಿತು.

೪) ೧೩-೧೧-೧೯೮೩ರಲ್ಲಿ ಹುಬ್ಬಳ್ಳಿಯ ಕಲಾ ಸಂಗಮದವರು ಬೆಂಗಳೂರಿನ ವೆಂಕಟಪ್ಪ ಚಿತ್ರ ಶಾಲೆಯಲ್ಲಿ ದಿ. ಬಸವರಾಜ ಹಳಿಜೋಳ ಇವರ ಚಿತ್ರಗಳ ಪ್ರದರ್ಶನ ಏರ್ಪಡಿಸಿದ್ದು, ಅಂದಿನ ರಾಜ್ಯ ಕೈಗಾರಿಕಾ ಹಾಗೂ ವಾಣಿಜ್ಯ ಮಂತ್ರಿಗಳಾದ ಶ್ರೀಮಾನ್ ಎಸ್.ಆರ್. ಬೊಮ್ಮಾಯಿ ಮುಖ್ಯ

ಅತಿಥಿಗಳಾಗಿದ್ದು, ಸಮಾಜ ಕಲ್ಯಾಣ ಇಲಾಖೆಯ ಚೇರ್‌ಮನ್ ಶ್ರೀಮತಿ ಸಾವಿತ್ರಿಬಾಯಿ ಗುಂಡಿ ಪ್ರದರ್ಶನವನ್ನು ಉದ್ಘಾಟಿಸಿದರು. ಖ್ಯಾತ ಪತ್ರಕರ್ತ ಡಾ॥ ಪಾಟೀಲ ಪುಟ್ಟಪ್ಪನವರು ಅಧ್ಯಕ್ಷತೆ ವಹಿಸಿದ ಈ ಪ್ರದರ್ಶನವನ್ನು ೩೦೦೦ಕ್ಕೂ ಹೆಚ್ಚಿನ ಸಂದರ್ಶಕರು ವೀಕ್ಷಿಸಿ ಸಂತೋಷ ಪಟ್ಟರು. ಸುಮಾರು ೩೫೦ ವಿವಿಧ ರೀತಿಯ ಕಲಾಕೃತಿಗಳು ಬೆಂಗಳೂರಿನಲ್ಲಿ ಪ್ರದರ್ಶನ ಕಂಡಿದ್ದು ಒಂದು ದಾಖಲೆ.


## ಕಲಾವಿದರ ಆಂತರ್ಯ

'ವಜ್ರಾದಪಿ ಕಠೋರಾಣಿ' ಇದು ಸಾಮಾನ್ಯವಾಗಿ ಕಲಾವಿದರ ಸ್ವಭಾವವಾದರೂ ಅಂಥ ಕಠೋರತೆಯಿಂದ ಸಿಡುಕುತನದಿಂದ ಕಲಾಯೋಗಿ ಬಸವರಾಜ ಹಳಿಜೋಳರು ತಮ್ಮ ಸ್ಥಿತ ಪ್ರಜ್ಞತೆಯನ್ನು ಎಂದೂ ಕಳೆದುಕೊಂಡವರೇ ಅಲ್ಲ. ಸಾಹಸ ಅವರ ಬದುಕಿನ ಸೂತ್ರವಾದರೆ ಸಂತೃಪ್ತಿ ಹಾಗೂ ಸರಳತೆ ಅವರ ಬದುಕಿನ ರೀತಿಯಾಗಿತ್ತು. ಅವರ ಶಾಂತಿಪ್ರಿಯತೆ, ಅಹಂಭಾವವಿಲ್ಲದ ಮೃದು-ಮಧುರ ಭಾಷೆ ಕಂಡರೆ ಅವರೊಬ್ಬ ಕಲಾನಿಪುಣರು, ಸಾಧಕರು ಹಾಗೂ ಕಾರ್ಯದಕ್ಷ ಕರ್ಮಯೋಗಿಗಳೆಂದು ಯಾರೂ ನಂಬುವಂತಿರಲಿಲ್ಲ. ಹುಬ್ಬಳ್ಳಿಯ ಸವಿತಾ ಹೊಟೇಲಿನ ಖೋಲಿಯೊಂದರಲ್ಲಿ ಅವರ ಗುರುಗಳಾದ ಮಿಣಜಗಿಯವರು ಉಳಿದುಕೊಂಡ ಪ್ರಸಂಗ ಹಾಗೂ ಗುರುಗಳ ಉಗ್ರವಾದ ರುಗ್ಣ ಶರೀರದ ಉಪಚಾರ ತಮ್ಮ ಸ್ವಂತ ವೆಚ್ಚದಿಂದ ನಡೆಸಿ ಆ ಗುರುವಿಗೆ ಶುಶ್ರೂಷೆ ಮಾಡುತ್ತಿದ್ದ ಅವರ ಮಾನವೀಯತೆ ಅವರ ದೈವೀ ಗುಣಕ್ಕೆ ಒಂದು ಉದಾಹರಣೆ. ಅವರು ಸ್ವತಃ ಪ್ರಚಾರದ ಗೀಳಿನವರಲ್ಲ. ತಮ್ಮ ತೊಂದರೆಯನ್ನು ಯಾರೊಂದಿಗೆ ಹೇಳಿಕೊಂಡವರೂ ಅಲ್ಲ. ಅವರು ಸಲ್ಲಿಸಿದ ಸೇವೆಯ ಋಣ ತೀರಿಸಲಾಗದಷ್ಟು ಭಾರ ಸಮಾಜದ ಮೇಲಿದೆ. ಆದ್ದರಿಂದ ಇಂಥ ಕಲಾಯೋಗಿಯು ಕಾಲನ ಪಾಶಕ್ಕೆ ಬಲಿಯಾದಾಗ ಅಂಥವರನ್ನು ತಾವು ಅಲಕ್ಷಿಸಿದುದು ತಪ್ಪಾಯಿತೆಂದು ಆತ್ಮೀಯರು ಕಲಾಪ್ರೇಮಿಗಳು


ಪರಿತಪಿಸಿದರು. ಆದರೆ ಕಾಲ ಮಿಂಚಿತ್ತು. ಹಕ್ಕಿಯು ಗೂಡಿನಿಂದ ತಪ್ಪಿಸಿಕೊಂಡು ಹೋಗಿತ್ತು. ಇವರ ಅನೇಕ ಕಲಾಕೃತಿಗಳು ಚೌಕಟ್ಟು ಸಹ ಹಾಕಿಸುವರು ಇಲ್ಲದೆ ಹೋಗಿವೆ.

## ಬರಿದು ಹಕ್ಕಿಯ ಗೂಡು

ಕಲೆಯ ನೆನಪಿಗೆ, ಕಲಾವಿದನ ಚಿರಸ್ಮರಣೆಗೆ, ಒಂದು ಚಿರಸ್ಮರಣೀಯ ಸ್ಮಾರಕವಾಗಬೇಕು. ಕನ್ನಡಿಗರ ಕಲಾಭಿಮಾನ ಸಾಕಷ್ಟು ಪ್ರಚಾರವಾಗಬೇಕು. ಕೆ. ವೆಂಕಟಪ್ಪನವರು ಕಲಾ ತಪಸ್ಸು ಮಾಡಿದ್ದರ ಬಗ್ಗೆ, ಈ ಮಹಾಪುರುಷರ ನೆನಪು ಶಾಶ್ವತ ಇರುವಂತೆ ''ವೆಂಕಟಪ್ಪ ಆರ್ಟ್ ಗ್ಯಾಲರಿ'' ಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದ್ದಾರೆ. ಇದೇ ರೀತಿ ಬಸವರಾಜ ಹಳಿಜೋಳರ ಕೃತಿಗಳ ಚಿರನೆನಪು ಉಳಿಯುವ ಪ್ರಯತ್ನಗಳಾಗಿ ಈ ಹಕ್ಕಿಯ ತ್ಯಾಗದ ಬದುಕಿಗೆ ಒಂದು ನೆಲೆ ಹಾಗೂ ಕರ್ನಾಟಕಕ್ಕೆ ಒಂದು ರಾಷ್ಟ್ರೀಯ ಘನತೆ ತರುವ ಯತ್ನವೊಂದು ಆಗಲೇಬೇಕು. ಹಕ್ಕಿಯ ಗೂಡನ್ನು ಪುನಃ ಸಂಸ್ಥಾಪಿಸಬೇಕು.




**ಅ.ನ.ಸು.** ಅವರ ಭಾವಚಿತ್ರ ತೈಲವರ್ಣ
Portrait of **A.Na.Su.** *Oil colour*



ಭಾವಚಿತ್ರ ತೈಲವರ್ಣ

*Portrait* Oil



ಡಾ|| ಎಂ. ವಿ. ಮಿಣಜಗಿ ಭಾವಚಿತ್ರ ತೈಲವರ್ಣ

**Dr. M.V. Minajagi** *Portrait* Oil



ಅಕ್ಕಮಹಾದೇವಿ ಜಲವರ್ಣ

**Akkamahadevi** *Water Colour*




ರೇಖಾಚಿತ್ರ

*Drawing*



ಭಾವಚಿತ್ರ ತೈಲವರ್ಣ *Portrait* Oil



ಶಿವನೃತ್ಯ ಜಲವರ್ಣ

**The dance of Siva** *Water Colour*




ನೀರಿನ ನಳದ ದೃಶ್ಯ ಜಲವರ್ಣ

**Water tap** *Water Colour*



ಬೆತ್ತಲೆ ತೈಲವರ್ಣ Nude *Oil*



ಸುಗ್ಗಿ ಜಲವರ್ಣ

**Harvest** *Water colour*



ಪ್ರಕೃತಿ ದೃಶ್ಯ ಜಲವರ್ಣ

**Nature** *Water Colour*



**Harvest** *Water Colour*


**ಕಣದ ದೃಶ್ಯ** *ಜಲವರ್ಣ*



ವ್ಯಕ್ತಿ ಚಿತ್ರ ತೈಲವರ್ಣ *Portrait* Oil



ಭಾವಚಿತ್ರ ತೈಲವರ್ಣ *Portrait* Oil



ರೇಖಾ ಚಿತ್ರ *Drawing*



**ರಾಮ ವನವಾಸಕ್ಕೆ ಹೋಗುವ ದೃಶ್ಯ** *ಜಲವರ್ಣ*

**Rama going to forest** *Water Colour*



ಎಸ್. ಆರ್. ಕಂಠಿ ಭಾವಚಿತ್ರ ತೈಲವರ್ಣ

**S.R. Kanthi** *Portrait* Oil




ಪಿ. ಟಿ. ಹಬೀಬಾ ಭಾವಚಿತ್ರ ತೈಲವರ್ಣ

**P.T. Habeeba** *Portrait* Oil



ಶ್ರೀ ಚಂದ್ರಶೇಖರ ಸ್ವಾಮಿ ಭಾವಚಿತ್ರ  ತೈಲವರ್ಣ

**Sri Chandrashekara swamy** *Portrait* Oil



ಭಾವಚಿತ್ರ ತೈಲವರ್ಣ *Portrait* Oil

# Foreword

Sri Basavaraja Halijol had identified himself as a portrait artist in the art educational tradition of the present century. His life was full of struggles and challanges. As a self respectful artist he had to undergo ordeals in his artistic perseverence. He had a photo studio and he taught art in an art school in Hubli, an important town in Bombay-Karnataka region. He was highly respected among the younger artists and students. He was responding to the feelings of people in every household in Hubli-Dharwad through his portraiture of them. Its a great pleasure for Academy to publish books to introduce the life and art of the senior artists who had an extraordinary personality like Sri Halijol.

Thanks to Sri R.G. Raykar, another senior artist who has taken pains to document various aspects of Sri Halijol's life. We are also greatful to Mrs. Halijol and Sri. Mohan B. Halijol, the eldest son of the great Master who provided with the relevant information needed by the writer.

I hope this book will be useful to scholars, students of art, art lovers and visual art culture. I wish that art lovers will receive it with pleasure.

Prof. **Andani. V.G.**
President

# Basavaraja Halijol : The Artist

## An Embodiment of Art

The people of Karnataka are the embodiment of art. "Kannadigas are unlettered masters of versification" so said the bard king Nrupathunga. As the story in the Mahabharatha relating to the art of drawing goes, chitralekha, a nymph becoming a companion to the daughter of Banasura, the demon king used to draw [memory drawing] for her the pictures of different princes and enquire her as to whom she liked most. There was a tradition of constructing a museum outside every capital cities and the statues of the late kings were installed therein. Bharata comes to know the details of Rams's exile and his father Dasaratha's tragic death, only upon entering such a museum in Pratima, the famous play of Bhasa, the sanskrit dramatist. So today the artist Basavaraja Madivalappa Halijol has joined this kind of museum. Therefore, let us see some aspects of his life and art.

Halijol who hailed from a very humble background has achieved the mark of eminence in the art of drawing and painting. However, his life was more of sorrowing than

rejoycings. But he was liked by one and all. Those who were inspired by him, have indeed, through their genuine art, come to recognise the doyenhood of Basavaraja Halijol.

## Blossoming Talent

The blossoming of jasmine spreads its fragrance even when it is still a bud. Halijol was born in Deshanur, a hamlet in Bailhongal taluk of Belgaum district on 13-12-1924. His parents were Madivalappa and Bhagirathi. They were traditional weavers. Like a beautious cloth made of different coloured threads, Halijol obtained each one of his only three years of primary education in three different villages- Deshanur, Hosur and Vadagaon. Thereafter, Basavaraja was his own teacher. Like Ekalavya who became his own preceptor in the absence of any preceptor Basavaraj too followed self learning. No wonder, Nature became a teacher to Basavaraja, the young lad. Since the degrees of schools and collegues could not make him educated, life itself became his learning place. Basavaraja, the boy who used to draw the pictures of animals, birds and scenes of nature on the note books of pupils in schools, indeed, became an ideal to his teachers and friends. On realizing his skill, everyone told him that his genius lay in the field of drawing. What could be seen in the future, was crystal-clear in the activities of his boyhood days.

## The test of living

The grovelling poverty forced Basavaraja to go to his maternal uncle who, in turn, instead of educating him forced him to be a herd for his goats. To his misfortune, one

of the goats escaped from the herd and ran away to Murugod. This brought a severe punishment on the boy. Basavaraja, later along with his brother he went to Vadagoan but the misery repeated. He worked as a porter at shahapur. All the seven members of the family-father, mother, three brothers and two sisters depended entirely on him for their livelihood. Saraswathi, the goddess of learning tested this young artist, this way.

Sometimes later, his elder brother Veerappa got a job in Adwani's National studio at Hubli. Later he helped Basavaraja also to join the same studio as an artist. Then Basavaraja was only twelve years old. This was in 1938.

## Moments of Adventure

Adventure is the factor that decides the phases of life of human beings as well as beasts. No wonder, Basavaraja's poverty compelled him to venture, while he was on the threshold of youthhood. The art-studio of Hubli provided him ample opportunities to unfold his artistic talent. The varied activities of the studio - film processing, setting, printing, painting, enlargement and the use of mediums for expression of art opened him the new horizons of the world of art. But he was waiting for his turn.

Once on some pretext the owner of National studio grew wild on him, without informing his kindred, even without a ticket, Basavaraja went to Bombay in search of a job. He began his art work with the late Narasavani, for a paltry sum of a rupee per day. But he was always thinking of something different. So he returned home but went back to Bombay again. Then the director V. Shantharam was making his

film called 'Dr. Kotniski Amarkahani' asked Basavaraja to do the work of painting for his picture. Here Shri. Basavaraja's high talent was instantly recognised and encouraged him. The brush moved its own way. He became an upstart. he drew big posters of royal courts, flower gardens, waterfalls, settings and made reproductions and they looked real. In fact, it was a turning point in his life. Keshavarao Mane, a police officer of Kalabadevi of Bombay wanted an enlargement of a picture of his wife from Basavaraja. So the latter did it. The drawing was quite realistic. The picture which he drew using his own variety of colours and neatness made the portraiture look real. It was so moving that the police officer could not help bursting into tears. He thanked the artist genuinly. He took Basavaraja home and gave him shelter thus Basavaraja like an orphan who went to Bombay found a new life. During this time he fell ill and was treated by Manes with affection. Thereafter, when Basavaraja recovered his good health, he was also asked to marry their daughter. Basavaraja was in dilemma; on one side he was over whelmed by the feelings of gratitude to Manes and on the other he wasn't willing to give any other meaning to their present relationship which was nutured purely on humane plane. So he said politely to visit his home town before taking any decision. Thus Basavaraja came back to Hubli with a view never to return to Bombay.

## Basavaraja Studio

Someone who had heard of the high talents of Basavaraja in Hubli, gave him three thousand rupees to set up a studio. The term of contract was to give the financier some part of the earning. However owing to the fall in

progress, that part of the income could not be paid to the financier. Consequently on that the financier locked the studio, it was on the day of Mahanavami.

However, the God had been merciful on Sri Basavaraja. One day when he was drinking tea, Alevur Anantaraya Bhatt, the owner of a hotel encouraged him to be courageous and gave him two thousand rupees on a condition that the latter should return it at his convenience. this was the way that Basavaraja's studio came to existence and flourished at Belgaum street.

## Thirst for a Teacher

Basavaraja had an ambition to study the art under the auspices of a good teacher. It is because of his in depth love for art, he wished to join an art school at Bombay. This also materialized. At this time Dr. M.V. Minajigi, the famous Indian artist had established a Kala-Mandir at Hubli on the upstairs of Sarafkatti Sindhagi's building. It is because of Dr. Minajigi's help, Basavaraja secured a degree in painting from Sir J.J. School of Art, Bombay in 1934. He joined minajigi's Art School on 10-3-1955 as a Lecturer in the beginning, he was influenced by the style of Minajigi but later he evolved a style of his own. Devotion he had for painting made his art divine. This achievement never came in the way of his love for students.

## On becoming himself a teacher

An instance may be illustrated here to say about Sri. Basavaraja's pride of art and his love for his students.

R.G. Rayakar, the author of this booklet was preparing for the examination of art Master at Sir J.J. School of Art, Bombay. He went to Hubli where Sri Basavaraja became his teacher, friend and guide. Therefore, as one of the close associates of Sri Basavaraja Halijol, the author here, expresses some of his honest feelings about him.

He always regret for the fact that Halijol did not get the recognition that was due to him in the domain of art in Karnataka. This feeling of him was strengthened on a number of occasions. He was an embodiment of art. His passion for his students was unparalled. His brush would play with colours and create pictures. People marvelled at his expertise in painting the shade and light. In this regard, he was an 'extempore' artist. His skill and creativity are apparent in his drawings.

## Sri Basavaraja's Art Attitude

The subtilities of human emotions of Basavarja's paintings would mesmarise anyone. Blending of colours, use of shade and light and the harmony of lines were magical skill and creativity blended harmomoniously in his pictures. His drawings and paintings are liviely because they are full of emotions when once Rayakar, the author of this booklet, requested Basavaraja to comment on modern art he remarked thus : "The best art is always timeless. Art grows with the maturity of the artist. The best art is always new".

Basavaraja's mastery in photography is in no way inferior to his skills of painting. He had arranged a number of exhibitions of his photographers of landscapes and human emotions which attracted masses.

Basavaraja was a good singer also. He would sing in the accompaniment of tambura for hours together He had accompanied his guru, Minajigi with tambura on a number of occasions.

To encourage his students, without fail, he would annually arrange one exhibition of the drawings and paintings of his students. And these exhibitions were a feast for the people of Hubli and Dharwad. These exhibitions educated the people of the twin cities in drawing and painting. By this the art studio of Basavaraja became a centre of art and culture and brought fame to the artist.

## As Principal of Kalamandira

After his retirement Dr. M.V. Minajigi promoted Basavaraja Halijol as principal of the college on 30-9-1965. On assuming charge both his life and art found a certain direction and dignity. He continued guiding his students systematically as ever before. his teaching of wash method colour media in water was a matter of rejuvenation. He also taught a certain new methods. he was always ready to teach his students even during vacation. It is this that won the hearts of his students. The respect and honour he received from his students was in no way less than the respect he showed to his own teacher.

After he became the principal, he came in contact with many artists and made them friends. the same Kalamandira was converted into Vijay Mahantesh College. A new building for the college was raised in the compound of Chitaguppe Hospital. It is because of the dedication of Sri Basavaraja Halijol, the principal, Dr. Minajagi college

achieved the present position of pride. Wonderful enough. Basavaraja who was once its student became Lecturer and principal of the same college.

Everyone remembers Basavaraja today for his dedicated service. He sacrificed his life and fame for the sake of the college. he shunned publicity.

He helped the artists when they were in trouble. He would take his students out to beautiful spots of nature and inspire them to make drawings and pencil sketches. He would teach the method of colour processing and also encourage them by appreciating the good qualities of their works. He taught all the technique of art without any reservation. It is this that made him nearer and dearer to his students. Students were never forced to pay their fees. And the students with gratitude would always remember their preceptor artist.

## Basavaraja's Last Days

Basavaraja's contribution to the development of this art institution is considerable. In his twenty-four years service of this Art School [Kalamandir] he served the institution as principal for 14 years. His honesty and efficiency had been unparalled. He retired as the principal of this institution on 2-7-1979. but he continued to be a guiding force in the field af art. When he died on 14-1-1982 in hubli he had left behind his devoted wife Sugandhavva, a big family of nine children and grovelling poverty. This has always been the tragic tale of artists in the world. Indeed, if the deities of wealth and Education reconcile themselves at least for the sake of artist would be the world's great era!

# The Honour

Regarding the late Basavaraja Halijol's brilliance in art, something should be stated. Variety and the skill of synthesis are the predominant qualities of his paintings and drawings. He had mastered the memory drawings, compositions in oil and water media and the Land Scapes. his art is original. There is great power in his works which attract anyone at once. Former Education Minister Sri. S.R. Kanthi once visited the exhibition of arts of Sri Basavaraja and was dumb found by the talents of the artist. He did not forget to salute the artist. Sri A.N. Krishna Rao, famous novelist of Karnataka, A.N. Subbarao, the artist from Bangalore, Dr. D.S. Karki, famous poet and scholar of Karnataka,Annarao Ganamukhi, former Education Minister of Karnataka are a few luminaries who were enthralled by the art of Basavaraja. they had also recorded their appreciation.

Dr. Patil Puttappa, Editor of Viswavani and Prapancha has written articles on the marvellous art of Basavaraja. 'Beleda baduku' written by him is also a book on the life and achievements of Basavaraja.

It is a matter of great significance that artists like Prof. M.C. Hipparagi, Prof. R.G. Rayakar, Sri P.R. Tippeswamy, Sri Onkar P. Kakade have also written on the art of Sri Basavaraja. the author of this booklet has utilised a part of the material from their works.

In 1964 a Karnataka Drawing Teacher's State Conference was held in Udupi Sri. Basavaraja gave a demonstration of his painting there. The spectators were thrilled. He drew the picture of a model sitting in front of him - like

flowers falling he drew lines of the figure on the canvas and coloured it in multi-shades. This was quite life-like, a great success. People were amazed. Sri S.R. Kanthi who came to inaugurate the conference appreciated the art and remarked that this artist is immortal. Sr. P.M. Nadagowda and T.M.A. Pai, the other dignitaries also recorded their respect and appreciation.

## Basavaraja Halijol's Famous Paintings

There are artists almost in every village of Karnataka. There are also artists who boast themselves as great with just two or four of their paintings and there are a few others who have craved for publicity but are forgotten soon. Besides, International artists like. Raja Ravivarma who did many paintings during his long stay in Karnataka did not trian the younger artists. But Basavaraja Halijol, the art-master did more than one thousand five hundred painting and created a tradition of artists. The lines that were drawn by his brush to draw the portrait would melt and disappear. That was the skill and expertise with which he would draw the portraits. Quickness with which he would draw the portrait of a person standing just in front of him in just minutes is a fete to watch. Rarely we find the same quickness and brilliance in other artists in the country. He would just in thirty or forty minutes draw a portrait of a person or paint in oil or water colour wonderfully. His pictures on the ruins of Hampi, Badami, Bijapur, Lakkundi and other places look marvellous.

These are a few of his famous water colour paintings. Savitri and Satyavana, Buddha, Umar Khayyam, Shakuntala, Akkamahadevi, Kittur Channamma, Shivaji,

Procession of Ganapati, Victory-March, the disk play between Bheema and Duryodhana, farmer's life at harvesting times and others.

The portrait of Dr. Shivaram Karantha, which is at Vidyavardhaka Sangha, Dharwad, oil paintings of Dr V.K. Gokak, Dr. M.V. Minajigi, A.N. Subbarao, D.V. Halabhavi, Dr D.S. Karki, Mruthyunjaya Swamiji of Dharwad, Chandrasekhara, saint of Hospet, S.R. Kanti, Beechi, J.P. Javali, K.V. Iraniraya, S.S. Mataladinni, M. Jivana and others are Praiseworthy. They even to this day adore the walls, halls and studios presenting the history of culture.

Basavaraja was a kind-hearted man. He never wanted his students to suffer from any reservation. He would teach his students the secrets of the brush, shade and light and the secrets of mixing of colours. He always desired that his students should find a place of honour and dignity in the field of art. Like lamp lighting other lamps, he trained his students to become great artists. He would always be happy to hear about the progress of his students in the field of art. Whenever something was achieved, he would, without any reservation, record his appreciation. In turn, his students would worship him.

Here are a few names of the artists who were once his students :

1) Sri V.B. Hiregowda, the principal and the Award winner of Lalithakala Academy.

2) Sri R.M. Hadapad, Nadoja award winner, Award winner of Lalithakala Academy and Rajyothsava and former President, Lalitha Kala Academy, Karnataka.

3) Sri R.G. Rayakar. Award winner of Karnataka Lalitha Kala Academy and Rajyothsava award.

4) Sri. Hublikar. Farmer cartoonist and award winner of Lalita Kala Academy and State award.

5) Sri P.S. Hiremath. Principal. Hall of Art and Sri L.C. Bellad. Sri. Dadute. Prof. Joysa. Vijaya Halijol son and others are treading the path of success in art. And their contribution to art is immence.

Sri M.C. Chetty the famous Artist was one of Basavaraja's beloved students of art. Even to this day he salutes his guru and pays his respect before starting any work of art. Without any reservations, he attributes the success of his art to his guru. Sri Basavaraja's personal care and guidance played a major role in developing the talents of Sri Chetty.

Mr. Chetty and other students of Sri Basavaraja are toiling hard to keep the tradition of the Kalamandir

## Salutations to the Departed Guru

The doyen of art. principal Basavaraja Halijol is no more today. The government of Karnataka has honoured the late Sri. Basavaraja Halijol Posthumously for his dedication to profession and seniority. In 1991, when Sri S. Bangarappa. the chief Minister of Karnataka gave the Award to Sri Halijol in the absence of him. Sugandhavva. his wife received it. At least after ten years of his death, he was honoured post humously by the Academy. And this kind of felicitiation is first of its kind.

Before I conclude, I recollect the sketches of his brush. In fact, his own blood would flow into the paintings he made. Dr. Minajigi, the founder of the Kalamandira welcomed Sri Basavaraja to his service. He made him the artist and principal. But during the end of his life, Minajigi, the artist had become an orphan. His wife had passed away many years ago. The issueless Minajigi was at his deathbed. Sri. Basavaraja along with his lady took care of Minajigi. He hired a room in Savitha Hotel and got him treated. Both the husband and wife took personal care in treating him. His lady would prepare the food for the patient. They treated him as their own father. Both of them shed tears on the deathbed of Sri Minajigi.

Basavaraja Halijol was a great artist and a philosopher. He was contented and he was never after money. Consequent on this, his family was left penny less after Halijol's death.

It is the responsibility of the society and artists that they should do something for the family of the artist. Artist Basavaraja is not with us today but his drawings and paintings of great artistic quality are with us to remind us the genuis of the late Basavaraja.

## Honour for Art

Artist Basavaraja left us in 1982. But here are a few occasions of which artist Basavaraja was honoured and respected during his life time itself.

1) Poet Kadangodlu Shankara Bhatta, President of 45th Kannada Sahitya Sammelana at Karwar himself hon-

oured the artist with gold medal in 1965 where an exhibition of his paintings was arranged.

2) In sirsi, he was honoured by Sri Goruru Ramaswamy Iyengar, the President of 55thAll India Kannada Sahitya Sammelana for his water colour and oil paintings, with a silver plate and citation.

3) In 1983, an exhibition of Halijol's paintings was arranged in Indira Glass-House of Hubli, by the arts college. The grace, elegance and the fineness of his paintings were a feast to the eyes of people who watched them.

4) On 13-11-1983, two hundred fifty paintings of Basavaraja were exhibited in Venkatappa Art Gallery Bangalore by art group of Hubli. More than 3000 visitors appreciated the genius of the artist. Sri. S.R. Bommai the then Industries and Commerce Minister for Karnataka was the chief guest. Smt. Savitri Bai Gundi, the then Chairperson, social welfare department inaugurated the exhibition Renowned journalist patil puttappa presided over the function.

## The Artist's Inner Voice

However like diamond artists are heard-hearted, Sri Basavaraja Halijol, the doyen of art was never a man of undesirable temper.

Though he was adventurous, he lived a life of simplicity and contentment. He was always soft spoken and possessed pleasing manners. His achievements never allowed him to become arrogant. The way in which he served his

ailing guru Minajigi, in Savita Hotel is an example of his gratitude and simiplicity. He never thought he was bigger than his guru. Even though he remained poor, financially he never complained against any one. He always shunned publicity. However he was, in his later days, neglected, he never complained against anyone. By the time the people could know the loss of a genius, the artist had breathed his last. Quite a good number of his paintings are still without frames. A suitable monument should be built in memory of the art and the achievements of the artist. There is already a fitting monument in Bangalore to commemorate the achievements of the artist Sri K. Venkatappa. Late Basavaraja Halijol is another artist in whose name an art gallery is to be established. And that art gallery with all the paintings and drawings of Basavaraja will certainly serve as a centre of art. It is the earnest desire of most of his students, friends and admirers.